ಐಕ್ಯರಂಗ



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 11 ಸಂಚಿಕೆ 1 ಜನವರಿ 1 1988 ರೂ 1.00

ಸಡಗರ ನಿರೀಕ್ಷೆಯ ವಾತಾವರಣದಲ್ಲಿ ಹದಿಮೂರನೇ ಮಹಾಧಿವೇಶನ ಆರಂಭ

ಬಿಳಿ ಸಮವಸ್ತ್ರದಾರಿ ಮಹಿಳೆಯರ ಮೇಳವಾದ್ಯಗಳು, ಸಾಲಾಗಿನಿಂತ ಕೆಂಪು ಸ್ವಯಂಸೇವಕರ ಧೀರ ನಮನ, ಕೆಂಬಾವುಟ ಕೈಯಲ್ಲಿ ಹಿಡಿದ ಪುಟಾಣಿಗಳ ಸ್ವಾಗತ ಗೀತೆಯ ನಡುವೆ ಸಡಗರದ, ನಿರೀಕ್ಷೆಯ, ಉತ್ಸಾಹದ ವಾತಾವರಣದಲ್ಲಿ ಸಿ.ಪಿ.ಐ.(ಎಂ)ನ ಹದಿಮೂರನೇ ಮಹಾಧಿವೇಶನ ತಿರುವನಂತಪುರದಲ್ಲಿ ಆರಂಭ ಾಯಿತು. ಪಾಲಿಟ್ ಬ್ಯೂರೋ ಸದಸ್ಯ ಬಿ.ಟಿ.ರಣದಿವೆ ಧ್ವಜಾ ರೋಹಣ ಮಾಡಿದರು. ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾಡ್ ಮಹಾಧಿ ವೇಶನದ ಉದ್ಘಾಟನೆ ನಡೆಸಿದರು.

ಉದ್ಘಾಟನಾ ಸಮಾರಂಭ.. ನಡೆದ ಕೃಷ್ಣ ... ನಗರದ ಹಚ್ಚಹಸುರಿನ ವಿಶಾಲ ...ನ ಕೆಂಪು ಸಾಗರವಾಗಿತ್ತು.

...ಕಮ್ಯುನಿಸ್ಟ್ ಧ್ಯೆಯೋದ್ದೇಶಗಳಿಗಾಗಿ ಸಾಮ್ರಾಜ್ಯ ...ಳ ಗಲ್ಲನ್ನು ನಗುನಗುತ್ತಾ ಏರಿದ ...ಸ್ಟ್ ಹುತಾತ್ಮರ ನಾಡಿನಿಂದ ರಿಲೇ ಓಟದಲ್ಲಿ ... ಹುತಾತ್ಮ ಜ್ಯೋತಿಯನ್ನು ಮಹಾಧಿವೇಶನದ ... ಸಮಿತಿ ಅಧ್ಯಕ್ಷರಾದ ಇ.ಕೆ.ನಾಯನಾರ್ ...ಟಚ್ಚುವ ಚಪ್ಪಾಳೆಗಳ ನಡುವೆ ಸ್ವೀಕರಿಸಿದರು. ... ಜ್ಯೋತಿಯನ್ನು ಹಿಡಿದೇ ಹುತಾತ್ಮರನ್ನು ...ೊಂಡರು. ಜ್ಯೋತಿಯನ್ನು ಹುತಾತ್ಮ ...ವಲ್ಲಿರಿಸಿ ಕೆಂಪು ವಂದನೆ ಸಲ್ಲಿಸಿದರು.

ಬಿ.ಟಿ.ಆರ್. ಕೆಂಬಾವುಟದ ಆರೋಹಣ ನಡೆಸಿದ ...ಲೆ ಪ್ರಧಾನಕಾರ್ಯದರ್ಶಿ ಇ.ಎಂ.ಎಸ್.. ...ರ್. ಹಾಗೂ ಇತರ ಪಾಲಿಟ್‌ಬ್ಯೂರೋ ಸದಸ್ಯರು. ... ಸಮಿತಿ ಸದಸ್ಯರು, ಪ್ರತಿನಿಧಿಗಳು ಹುತಾತ್ಮ ...ೆದುರು ಕೆಂಪು ವಂದನೆ ಸಲ್ಲಿಸಿದರು. ...ರಿ ಹಾಡುಗಳು ವಾತಾವರಣವನ್ನು ತುಂಬಿದವು.

ಮಹಾಧಿವೇಶನದ ವೇದಿಕೆ ದುಡಿಮೆಗಾರ ವರ್ಗದ ಸಿದ್ಧಾಂತಕ್ಕೆ ತಳಪಾಯ ಹಾಕಿದ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಸ್ಟಾಲಿನ್ ಭಾವಚಿತ್ರಗಳಿಂದ ಮತ್ತು ಭಾರತದ ಕಮ್ಯುನಿಸ್ಟ್ ಆಂದೋಲನದ ನೇತಾರರಾದ ಮುಜಾಫರ್ ಅಹ್ಮದ್, ಎ.ಕೆ.ಜಿ. ಕೃಷ್ಣಪಿಳ್ಳೈ, ಪಿ.ಸುಂದರಯ್ಯ, ಪಿ.ರಾಮ ಮೂರ್ತಿ, ಎ.ಬಾಲಸುಬ್ರಮಣ್ಯಂ ಮತ್ತು ಪ್ರಮೋದ್ ದಾಸಗುಪ್ತ ಚಿತ್ರಗಳೊಂದಿಗೆ ಸಜ್ಜಿತವಾಗಿತ್ತು.

ಕೇರಳದ ಮುಖ್ಯಮಂತ್ರಿ ಹಾಗೂ ಸ್ವಾಗತ ಸಮಿತಿ ಅಧ್ಯಕ್ಷ ಇ.ಕೆ.ನಾಯನಾರ್ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಕೇರಳದ ಕಾರ್ಮಿಕ ವರ್ಗ ತಾನು ನಡೆಸಿದ ಚರಿತ್ರಾರ್ಹ ಹೋರಾಟಗಳಿಂದಾಗಿ 1957 ರಲ್ಲಿ ದೇಶದ ಕಮ್ಯುನಿಸ್ಟ್ ಚಳುವಳಿಗೆ ದಾರಿ ತೋರಿಸಿ ಕೊಟ್ಟಿತು. 1987ರಲ್ಲಿ ಕಾಂಗ್ರೆಸ್ (ಐ) ಮತ್ತು ಜಾತಿ ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಎಡ ಪ್ರಜಾಪ್ರಭುತ್ವರಂಗ ಬೆಳೆಸುವಂತಾಯಿತು. ತನ್ನ ಸ್ವಾಗತ ಭಾಷಣದಲ್ಲಿ ಈ ಐತಿಹಾಸಿಕ ಹೋರಾಟಗಳನ್ನು ಕಾಂ.ನಾಯನಾರ್ ನೆನಪಿಸಿದರು.

ಪಾಲಿಟ್‌ಬ್ಯೂರೋ ಸದಸ್ಯ ಕಾಂ.ಹರಿಕಿಶನ್ ಸಿಂಗ್ ಸುರ್ಜಿತ್ 16 ದೇಶಗಳಿಂದ ಬಂದಿದ್ದ 42 ಸೌಹಾರ್ದ ಪ್ರತಿನಿಧಿಗಳನ್ನು ಪರಿಚಯಿಸಿ ಕೊಡುತ್ತಿದ್ದಂತೆ ಮಕ್ಕಳು ಒಬ್ಬೊಬ್ಬರಿಗೂ ಹೂಮಾಲೆ, ಹೂಗುಚ್ಛ ನೀಡಿದರು.

ಒಂದು ನಿರ್ಣಾಯಕ ರಾಜಕೀಯ ಸಮರ ಮುಂದೆ ಬರಲಿದೆ ಎಂದರು ಮಹಾಧಿವೇಶನದ ಉದ್ಘಾಟನೆ ಮಾಡುತ್ತಾ ಪ್ರಧಾನಕಾರ್ಯದರ್ಶಿ ಕಾಂ.ಇ.ಎಂ.ಎಸ್. ನಂಬೂದಿರಿಪಾಡ್. ಕಾಂಗ್ರೆಸ್ (ಐ)ನ್ನುಅಧಿಕಾರದಿಂದಿಳಿಸುವುದು, ಕೋಮುವಾದಿ ಶಕ್ತಿಗಳನ್ನು ಜನತೆಯಿಂದ ದೂರಸರಿಸುವುದು ಇವು ಎರಡು ಮುಖ್ಯ ಉದ್ದೇಶಗಳು. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಟ್ಟಾಗಿ ಶ್ರಮಿಸಿದರೆ ಇದು ಸಾಧ್ಯ ಎಂದರು ಇ.ಎಂ.ಎಸ್.

1964ರಲ್ಲಿ ಸಿ.ಪಿ.ಐ.(ಎಂ) ಉದಯವಾದ ನಂತರ ಮೊದಲಬಾರಿಗೆ ವಿಶ್ವದ ಸೋದರ ಪಕ್ಷಗಳ ಪ್ರತಿನಿಧಿಗಳು ಈ ಮಹಾಧಿವೇಶನದಲ್ಲಿ ಭಾಗವಹಿಸು ವುದರ ಬಗ್ಗೆ ಹೇಳುತ್ತಾ ಇದು ಒಂದು ಹೊಸ ಯುಗದ ಆರಂಭ ಎಂದರು- ನಮ್ಮ ಪಕ್ಷಕ್ಕೂ, ವಿಶ್ವ ಕಮ್ಯುನಿಸ್ಟ್ ಆಂದೋಲನಕ್ಕೂ.

ಗೊರ್ಬಚೆವ್‌ರ ಎರಡು ಭಾರತ ಭೇಟಿಗಳು, ಭಾರತದ ಪ್ರಧಾನಿಗಳ ಚೀಣಾ ಭೇಟಿಯ ಹಿನ್ನೆಲೆಯಲ್ಲಿ ಭಾರತ, ಚೀಣಾ, ಸೋವಿಯತ್ ಒಕ್ಕೂಟಗಳ ನಡುವಿನ ಸಂಬಂಧಗಳ ಬಗ್ಗೆ ಲೆನಿನ್ ನುಡಿಯನ್ನು ಇ.ಎಂ.ಎಸ್. ತಮ್ಮ ಉದ್ಘಾಟನಾ ಭಾಷಣದಲ್ಲಿ ನೆನಪಿಸಿಕೊಟ್ಟರು.

ಪ್ರಧಾನ ಕಾರ್ಯದರ್ಶಿಗಳ ಉದ್ಘಾಟನಾ ಭಾಷಣದ ನಂತರ ಮಹಾಧಿವೇಶನದ ಕಲಾಪಗಳನ್ನು ನಡೆಸಿಕೊಡಲು ಸುರ್ಜಿತ್, ಗಂಗಾಧರ ರಾವ್, ವಿಮಲಾ ರಣದಿವೆ, ಪಿ.ಕೆ. ಕುಂಜುಚ್ಚನ್ ಮತ್ತು ಆನಂದ ಪಾಠಕ್ ಈ ಐವರು ಸದಸ್ಯರುಳ್ಳ ಅಧ್ಯಕ್ಷೀಯ ಮಂಡಳಿಯನ್ನು ಆರಿಸಲಾಯಿತು. ನಿರ್ಪೇನ್ದ ಮಂಜುಂದಾರ್, ಪಿ.ರಂಗಣೇಕರ್ ಮತ್ತು ಎಂ.ದಾಸನ್ ರವರು ಸದಸ್ಯರಾಗುಳ್ಳ ಅರ್ಹತಾ ಪರಿಶೀಲನಾ ಸಮಿತಿ ರಚಿತಗೊಂಡಿತು. ಪಾಲಿಟ್ ಬ್ಯೂರೋ ಮಹಾಧಿವೇಶನದ ಮಾರ್ಗದರ್ಶಕ ಸಮಿತಿಯಾಗಿ ಕಾರ್ಯನಿರ್ವಹಿಸುವುದೆಂದು ನಿರ್ಧರಿಸಲಾಯಿತು.

8ನೇ ಪುಟನೋಡಿ



ವಿದ್ಯುಚ್ಛಕ್ತಿ ನೌಕರರು ಟ್ಯೂಬ್‌ಗಳಿಂದ ರಚಿಸಿದ ಸ್ತಂಭ

ರಾಜ್ಯ ತೊಗರಿ ಬೆಳೆಗಾರರ ಸಮಾವೇಶ

...ರ್ನಾಟಕ ಪ್ರಾಂತ ರೈತ ಸಂಘದ ...ದಲ್ಲಿ 19-12-88 ರಂದು ... ತೊಗರಿ ಬೆಳೆಗಾರರ ಸಮಾ...ಶವನ್ನು ಗಲ್ಬರ್ಗಾದ ವೀರಶೈವ ...ಣ ಮಂಟಪದಲ್ಲಿ ನಡೆಸ...ತು.

...ಲ್ಬರ್ಗಾ, ಬೀದರ್, ರಾಯಚೂರು, ಬಿಜಾಪುರ ಜಿಲ್ಲೆ ಗಳಿಂದ ...ಂದಿದ್ದ 300 ಜನ ಪ್ರತಿ ನಿಧಿಗಳು ...ಮಾವೇಶದಲ್ಲಿ ಪಾಲ್ಗೊಂಡು ತೊಗರಿ ...ಳೆಗಾರರ ಸಂಕಷ್ಟಗಳ ಕುರಿತು ಚರ್ಚೆ ನಡೆಸಿ ಈ ತೀರ್ಮಾನಗಳನ್ನು ತೆಗೆದುಕೊಳ್ಳ ಲಾಯಿತು.

1) ತೊಗರಿ ಬೆಳೆಗಾರರ ಸಹಕಾರಿ ನಿಗಮವನ್ನು ಸ್ಥಾಪಿಸಬೇಕು. ಸರ್ಕಾರ ನಿಗಧಿತ ಹಣವನ್ನು ವಿನಿಯೋಗಿಸಿ ರೈತರ ಸಹಕಾರಕ್ಕೆ ನಿಲ್ಲಬೇಕು. ನಿಗಮದಿಂದಲೇ ಸಬ್ಸಿಡಿ ದರದಲ್ಲಿ ಗೊಬ್ಬರ, ಕ್ರಿಮಿನಾಶಕ, ಬೀಜವನ್ನು ಒದಗಿಸಬೇಕು.

2) ತೊಗರಿ ನಿಗಮ ಸ್ಥಾಪನೆಯಾಗುವವರೆಗೆ ಕರ್ನಾಟಕ ಸಹಕಾರಿ ಮಾರುಕಟ್ಟೆ ಫೆಡರೇಷನ್ ಮುಖಾಂತರ ಖರೀದಿಸಿ ಬೆಲೆ ರೂ.800ಕ್ಕಿಂತಲೂ ಕಡಿಮೆಯಾಗದಂತೆ ನೋಡಿಕೊಳ್ಳಬೇಕು.

3) ಹಸಿ ಬರಗಾಲದಿಂದ ಆದ ನಷ್ಟವನ್ನು ಜಿಲ್ಲೆವಾರು ಸರ್ವೆ ಮಾಡಿ ರೈತರಿಗೆ ಪರಿಹಾರ ಒದಗಿಸಬೇಕು. ನಷ್ಟವಾದ ಭೂಮಿಗೆ ತೆರಿಗೆಯನ್ನು ಮನ್ನಾ ಮಾಡಬೇಕು. ಈಗ ತೆಗೆದು ಕೊಂಡ ಬೆಳೆ ಸಾಲ ಮನ್ನಾ ಮಾಡಿ ಹೊಸ ಸಾಲ ಕೊಡುವಂತಾಗ ಬೇಕು. ಜಾನುವಾರುಗಳಿಗೆ ಮೇವು, ಕೃಷಿ ಕಾರ್ಮಿಕರಿಗೆ ಕಾಮಗಾರಿ ಒದಗಿಸಲು ತುರ್ತು ಕ್ರಮವಹಿಂಸಬೇಕು.

4) ರಾಜ್ಯ ಸರ್ಕಾರ ಘೋಷಿಸಿದ ಬಡ್ಡಿ ಮನ್ನಾವನ್ನು ನಬಾರ್ಡ್ ಕೂಡಲೇ ಮನ್ನಿಸಿ, ರಾಜ್ಯಕ್ಕೆ ಕೊಡುವ ಸಾಲವನ್ನು ಕೂಡಲೇ ಬಿಡುಗಡೆ ಮಾಡಬೇಕು. ಕೇಂದ್ರ ಸರ್ಕಾರ ಬಡ ರೈತರ ಸಾಲವನ್ನು ಉಳಿದ ರೈತರ ಬಡ್ಡಿಯನ್ನು ಮನ್ನಾ ಮಾಡಬೇಕು.

5) ಕಳೆದ ಹಲವಾರು ವರ್ಷಗಳಿಂದ ಗುಲ್ಬರ್ಗಾ ಜಿಲ್ಲೆಯನ್ನು ಡಿಫಾಲ್ಟರ್ ಎಂದು ಘೋಷಿಸಿದ್ದು ರದ್ದುಗೊಳಿಸಬೇಕು.

6) ರಾಜ್ಯದಲ್ಲಿ ಗೊಬ್ಬರ, ಕ್ರಿಮಿನಾಶಕ, ಬೀಜ ಮಾರಾಟದಲ್ಲಿ ಭಾರಿ ಮೋಸ ಹಾಗು ಅವ್ಯವಹಾರ ನಡೆಯುತ್ತಿದ್ದು, ಸರ್ಕಾರ ಅದನ್ನು ತಡೆಯಲು ತುರ್ತುಕ್ರಮವಹಿಂಸಬೇಕು.

7) ರಾಜ್ಯದಲ್ಲಿ ಸರ್ಕಾರ ಮಾರುಕಟ್ಟೆ ತೆರಿಗೆಯನ್ನು ರದ್ದುಗೊಳಿಸಿದ್ದರು. ದಲ್ಲಾಳಿಗಳು ಇನ್ನೂ ಸಂಗ್ರಹಿಸುತ್ತಿದ್ದು ಅದನ್ನು ತಡೆಯಲು ಉಗ್ರಕ್ರಮ ತೆಗೆದುಕೊಳ್ಳಬೇಕು.

8ನೇ ಪುಟನೋಡಿ

ಕೆಂಬಾವುಟ ದಿನಾಚರಣೆ

ಸಿ.ಪಿ.ಐ.(ಎಂ) ಕೇರಳ ರಾಜ್ಯ ಸಮಿತಿ ಪಕ್ಷದ ಮಹಾಧಿವೇಶನದ ಸಂದೇಶವನ್ನು ರಾಜ್ಯದ ಮೂಲೆ-ಮೂಲೆಗೂ ತಲುಪಿಸಲು ಇಡೀ ರಾಜ್ಯದಲ್ಲಿ ಪಕ್ಷದ ಎಲ್ಲಾ ಸದಸ್ಯರು ತಮ್ಮ ಮನೆಗಳ ಮೇಲೆ, ಮುಖ್ಯ ಬೀದಿಗಳಲ್ಲಿ, ಬೀದಿ ಜಂಕ್ಷನ್‌ಗಳಲ್ಲಿ ಕೆಂಬಾವುಟ ಹಾರಿಸಬೇಕೆಂದು ಕರೆ ನೀಡಿತ್ತು. ಈ ಪ್ರಕಾರ, ಡಿಸೆಂಬರ್ 18 ರಂದು ರಾಜ್ಯಾದ್ಯಂತ ಕೆಂಬಾವುಟ ದಿನಾಚರಣೆ ನಡೆಯಿತು.

ಉರ್ದು ಭಾಷೆಗೆ ರಕ್ಷಣೆ

ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ

ರಾಷ್ಟ್ರೀಯ ಆಂದೋಲನಕ್ಕೆ 'ಇಂಕ್‌ಲಾಬ್' ಎಂಬ ಶ್ರೀಮಂತ ಪದದ ಅಮೂಲ್ಯ ಕೊಡುಗೆ ನೀಡಿದ ಉರ್ದು ಭಾಷೆಯ ಸ್ಥಿತಿ ಈಗ ಏನು? ಏಕೆ ಹೀಗೆ? ನಮ್ಮ ಪ್ರಜಾಪ್ರಭುತ್ವ ಚಳುವಳಿಯ ಮೇಲೆ ಇದರ ಪರಿಣಾಮವೇನು?
ಹರಕಿಶನ್ ಸಿಂಗ್ ಸುರ್ಜಿತ್ ವಿಶ್ಲೇಷಿಸಿದ್ದಾರೆ.

ಭಾರತ ಸರ್ಕಾರ ಭಾಷಾ ಸಮಸ್ಯೆಯ ಕಡೆಗೆ ಯಾವ ಗಮನವನ್ನು ಕೊಡುತ್ತಿಲ್ಲ. ಪ್ರಜಾಪ್ರಭುತ್ವದ ಬೆಳವಣಿಗೆಯಲ್ಲಿ ಅದರ ಪಾತ್ರದ ಮಹತ್ವವೇ ಸರ್ಕಾರಕ್ಕೆ ತಿಳಿದಂತಿಲ್ಲ. ಭಾರತೀಯ ಭಾಷೆಗಳಿಗೆ

ಇನ್ನೂ ಸಮಾನ ಸ್ಥಾನ-ಮಾನ ದೊರೆತಿಲ್ಲ. ಆದರೂ ರಾಜ್ಯಗಳ ಭಾಷಾವಾರು ಮರುವಿಂಗಡಣೆಯಿಂದ ಈ ಭಾಷೆಗಳ ಬೆಳವಣಿಗೆಗೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಂದ ಸ್ವಲ್ಪವಾದರೂ ಬೆಂಬಲ ಸಿಕ್ಕುವಂತಾಯಿತು. ಆದರೆ ಉರ್ದು ಭಾಷೆಗೆ ಇದೂ ದಕ್ಕಿಲ್ಲ. ಉರ್ದು ಭಾಷೆಯನ್ನಾಡುವ ಜನಗಳ ಸಂಖ್ಯೆ ಗಮನಿಸಿದರೆ ದೇಶದ ಒಂದು ಪ್ರಮುಖ ಭಾಷೆಯಾದ ಉರ್ದು ತಾನು ಹುಟ್ಟಿದ ನಾಡಿನಲ್ಲೇ ಅನಾಥವಾಗಿದೆ. ಈ ಭಾಷೆಯ ವಿರುದ್ಧ ಒಂದು ಆಳವಾದ ಪೂರ್ವಾಗ್ರಹವೇ ಈ ದುಸ್ಥಿತಿಗೆ ಕಾರಣ.

ಸ್ವಾತಂತ್ರ್ಯದ ಮೊದಲು ಉರ್ದು ಭಾರತದ ಸಂಪರ್ಕ ಭಾಷೆಯಾಗಿತ್ತು. ಉತ್ತರ ಭಾರತದಲ್ಲಿ ಜನ ಅದನ್ನು ಸ್ವೇಚ್ಛೆಯಿಂದ ಸಂತೋಷದಿಂದ ಕಲಿಯುತ್ತಿದ್ದರು. ಅದೊಂದು ಪರಕೀಯ ಭಾಷೆಯೆಂಬ ಭಾವನೆಯೇ ಇರಲಿಲ್ಲ. ಸ್ವಾತಂತ್ರ್ಯಾ ನಂತರವೇ ಉರ್ದು ವಿರುದ್ಧ ಪೂರ್ವಾಗ್ರಹ ಸೃಷ್ಟಿಸಲು ನಿರಂತರ ಪ್ರಯತ್ನ ನಡೆಸಲಾಯಿತು.

ಅದು ಭಾರತದಲ್ಲೇ ಹುಟ್ಟಿದ, ಬೆಳೆದ, ಬ್ರಿಟೀಶ್ ಸಾಮ್ರಾಜ್ಯಶಾಹಿಯ ವಿರುದ್ಧ, ಗುಲಾಮಿತೆಯ ವಿರುದ್ಧ ಜನರ ದೇಶಪ್ರೇಮೀ ಭಾವನೆಗಳನ್ನು ಬಡಿದೆಬ್ಬಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಪ್ರಮುಖ ಪಾತ್ರವಹಿಸಿದ ಚಾರಿತ್ರಿಕ ವಾಸ್ತವತೆಯನ್ನೇ ಅಳಿಸಿ ಹಾಕುವ ಪ್ರಯತ್ನ ನಡೆದಿದೆ. ಉರ್ದು ಪಾಕಿಸ್ತಾನದ ಭಾಷೆ. ಉರ್ದುವಿಗೆ ಪ್ರೋತ್ಸಾಹ ನೀಡುವುದೆಂದರೆ ಪಾಕಿಸ್ತಾನಕ್ಕೆ ಬೆಂಬಲ ನೀಡಿದಂತೆ ಎಂಬ ತಪ್ಪು ತಿಳುವಳಿಕೆ ಹರಡಲು ಪ್ರಯತ್ನಿಸಲಾಗಿದೆ. ಭಾಷೆಗೆ ಜಾತಿ-ಮತಗಳ ಸೀಮೆ ಒಡೆದು ಸಾಂಸ್ಕೃತಿ ಮತ್ತು ನಾಗರೀಕತೆ ಸೃಷ್ಟಿಸುವ ಅಪಾರ ಶಕ್ತಿಯಿದೆ ಎಂಬುದು ಈ ಕುರುಡರಿಗೆ ತಿಳಿದಿಲ್ಲ. ಬಾಂಗ್ಲಾದೇಶ ಪಾಕಿಸ್ತಾನದಿಂದ ಬೇರೆಯಾಗಲು ಪಾಕಿಸ್ತಾನದ ಭಾಷಾಪಕ್ಷಪಾತ ಒಂದು ಮುಖ್ಯ ಕಾರಣ.

ಬ್ರಿಟೀಶ್ ಸಾಮ್ರಾಜ್ಯಶಾಹಿಗಳು ನಮ್ಮ ಮೇಲೆ ಹೇರಿದ ಇಂಗ್ಲೀಷ್ ಭಾಷೆಯನ್ನು ವಿಪರೀತ ಶುಲ್ಕ ತೆತ್ತರೂ ಸಂತೋಷದಿಂದ ತಮ್ಮ ಮಕ್ಕಳಿಗೆ ಕಲಿಸುವ ಜನಗಳೇ ಉರ್ದುವನ್ನು ಸಹಿಸಲು ಕೂಡಾ ಸಿದ್ಧರಿಲ್ಲ ಎನ್ನುವುದು ಸ್ವಾತಂತ್ರ್ಯದ ನಾಲ್ಕು ದಶಕಗಳ ನಂತರವೂ ಕಂಡು ಬರುವ ಒಂದು ವಿಪರ್ಯಾಸ.

ಉರ್ದು ವಿರುದ್ಧ ಪಕ್ಷಪಾತ ಧೋರಣೆಯಿಂದಾಗಿ, ಸ್ವಾತಂತ್ರ್ಯಾನಂತರದ ಹೊಸ ಪೀಳಿಗೆಗೆ ಉರ್ದು ಭಾಷೆ ಸ್ವಾತಂತ್ರ್ಯ ಚಳುವಳಿಯಲ್ಲಿ ವಹಿಸಿದ ಉನ್ನತ ಪಾತ್ರದ ಬಗ್ಗೆ ತಿಳಿದೇ ಇಲ್ಲ. ರಾಮಪ್ರಸಾದ್ ಬಿಸ್ಮಿಲ್, ಅಶ್‌ಫತುಲ್ಲಾ, ಮೌಲಾನ್ ಅಜರುಲ್ಲಾ ಖಾನ್, ಮೌಲಾನಾ ಹುಸೇನ್ ಅಹ್ಮದ್ ಮದ್ನಿ, ಮೌಲಾನಾ ಹಸರತ್ ಮೊಹಾನಿ, ಪ್ರೇಮ್‌ಚಂದ್, ಮೌಲಾನಾ ಅಬುಲ್ ಕಲಮ್ ಆಝಾದ್, ಕೃಷನ್ ಚಂದರ್, ಸಜ್ಜದ್ ಜಾಹೀರ್, ಫೈಜ್ ರಾಜೆಂದರ್ ಸಿಂಗ್ ಬೇಡಿ ಸಾಹಿರ್ ಲುಧಿಯಾನವಿ ಹೀಗೆ ಸ್ವಾತಂತ್ರ್ಯ ಹೋರಾಟಗಾರರಲ್ಲಿ ತಮ್ಮ ಕವನ, ಲೇಖನ, ಭಾಷಣಗಳ ಮೂಲಕ ಸ್ಫೂರ್ತಿ ತುಂಬಿದ ಉರ್ದು ಲೇಖಕರ, ಕವನಗಳ, ಕ್ರಾಂತಿಕಾರಿಗಳ ಒಂದು ದೊಡ್ಡ ಪಟ್ಟಿಯನ್ನೇ ಕೊಡಬಹುದು.

ಉರ್ದುವಿನ ವಿರುದ್ಧ ಯಾವುದೇ ಪೂರ್ವಾಗ್ರಹ, ಪಕ್ಷಪಾತವಿಲ್ಲದ ದಿನಗಳವು. ಜನಗಳಿಗೆ ವಿಚಾರಗಳನ್ನು ಅಭಿಪ್ರಾಯಗಳನ್ನು ಅಭಿವ್ಯಕ್ತಗೊಳಿಸುವ ಒಂದು ಪರಿಣಾಮಕಾರಿ ಸಾಧನವಾಗಿತ್ತು ಆ ಭಾಷೆ. ಆದ್ದರಿಂದಲೇ ವಾಯುವ್ಯ ಭಾರತದಲ್ಲಿ ಹಲವಾರು ಉರ್ದು ಪತ್ರಿಕೆಗಳು ಪ್ರಕಟಗೊಳ್ಳಲಾರಂಭಿಸಿದವು. ಅಕ್ಟೋಬರ್ ಕ್ರಾಂತಿಯಿಂದ ಸ್ಫೂರ್ತಿ ಪಡೆದು ಅಝುರ್‌ಬೈಯಿನ್‌ನ ಬಾಕುವಿನಿಂದ ಉರ್ದು ಪತ್ರಿಕೆಯೊಂದು ಪ್ರಕಟವಾಗಲಾರಂಭಿಸಿತು. ನಂತರ 20ರ ದಶಕದಲ್ಲಿ ಲಾಹೋರಿನಿಂದ 'ಇಂಕ್‌ಲಾಬ್' ಪತ್ರಿಕೆ ಬರಲಾರಂಭಿಸಿತು. ಅಕಾಲಿ ಆಂದೋಲನದ ಪತ್ರಿಕೆ 'ಅಕಾಲಿ'ಯ ಉರ್ದು ಆವೃತ್ತಿ ಪಂಜಾಬೀ ಆವೃತ್ತಿಗಿಂತ ಹೆಚ್ಚು ಪ್ರಸಾರ ಪಡೆದಿತ್ತು. ಕೆಲವು ಹಿಂದೂ ಮುಖಂಡರು ಕೂಡಾ ತಮ್ಮ ಪ್ರಚಾರ ಪಡಿಸಲು ಉರ್ದು ಭಾಷೆಯಲ್ಲೇ ಪತ್ರಿಕೆಗಳನ್ನು ಪ್ರಕಟಿಸಿದ್ದರು. ಉದಾ:- ಮಿಲಾಪ್, ಪ್ರತಾಪ್, ವಂದೇ ಮಾತರಂ. ಇವುಗಳಲ್ಲಿ ಬಹಳಷ್ಟು ಪತ್ರಿಕೆಗಳ ಹಿಂದೀ ಭಾಷಾ ಆವೃತ್ತಿಗಳು ಸ್ವಾತಂತ್ರ್ಯದ ನಂತರವೇ ಆರಂಭವಾದವು.

1930ರ ದಶಕದಲ್ಲಿ ಕಾಂಗ್ರೆಸ್‌ನ ಬಂಡವಾಳಶಾಹಿ ಭೂಮಾಲಕ ಮುಖಂಡತ್ವದ ಬಗ್ಗೆ ಭ್ರಮ ನಿರಸನ ಹೊಂದಿದ ಯುವಜನ 1936ರಲ್ಲಿ ಸ್ಥಾಪಿಸಿದ ಪ್ರಗತಿಪರ ಲೇಖಕರ ಸಂಘ ಸಾಹಿತ್ಯದ ಮೂಲಕ ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದೀ ವಿಚಾರಧಾರೆ ಹರಡಿದರು; ಸಾಮಾಜಿಕ-ಸಾಂಸ್ಕೃತಿಕ ಮತ್ತು ಸೈದ್ಧಾಂತಿಕ ವಲಯದಲ್ಲಿ, ಲೇಖನಿಗಳೊಂದಿಗೆ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದರು. ಅವರ ಸಮರ ಘೋಷ 'ಇಂಕ್‌ಲಾಬ್' ನಮ್ಮ ರಾಷ್ಟ್ರೀಯ ಆಂದೋಲನಕ್ಕೆ, ಉರ್ದುವಿನ ಒಂದು ಮಹಾನ್ ಕೊಡುಗೆ.

ಈ ಎಲ್ಲಾ ಚಾರಿತ್ರಿಕ ದಾಖಲೆಗಳಿದ್ದರೂ, ಈಗ ಉರ್ದುವಿನ ಸ್ಥಿತಿ ಏನು? ಸ್ವಾತಂತ್ರ್ಯ ಬಂದ ಕೂಡಲೇ ಉತ್ತರಪ್ರದೇಶ, ರಾಜಸ್ತಾನ ಮತ್ತು ಮಧ್ಯಪ್ರದೇಶಗಳಲ್ಲಿ ಉರ್ದು ಕಲಿಕೆಯನ್ನು ರದ್ದುಪಡಿಸಲಾಯಿತು. ಸಾವಿರಾರು ಉರ್ದು ಶಿಕ್ಷಕರು ನಿರುದ್ಯೋಗಿಗಳಾದರು. ಲಕ್ಷಾಂತರ ಮಂದಿ ಒಮ್ಮೆಲೇ ಅಕ್ಷರಸ್ಥರಿಂದ ನಿರಕ್ಷರಿಗಳಾಗಿಬಿಟ್ಟರು. ಇದರ ವಿರುದ್ಧ ಅಂಜುಮಾನ್ ತಾರೀಖ್-ಎ-ಉರ್ದು 12 ಲಕ್ಷ ಸಹಿ ಸಂಗ್ರಹಿಸಿದರೂ ಪಕ್ಷಪಾತ ನೀತಿ ಮುಂದುವರೆಯಿತು ತ್ರಿಭಾಷಾ ಗಾತ್ರದ ನೆಪವೊಡ್ಡಿ ಉರ್ದು ಕಲಿಕೆಗೆ ಸೌಲಭ್ಯ ನಿರಾಕರಿಸಲಾಯಿತು. ಉರ್ದು ಭಾಷಿಕರು ಕೋಟ್ಯಂತರ ಸಂಖ್ಯೆಯಲ್ಲಿರುವ ಉತ್ತರಪ್ರದೇಶ, ಬಿಹಾರಗಳಲ್ಲೂ ಉರ್ದುವಿಗೆ ಎರಡನೇ ಭಾಷೆಯ ಸ್ಥಾನಮಾನ ಪಡೆಯಲು ಸಾಧ್ಯವಾಗಿಲ್ಲ.

ಈ ಪಕ್ಷಪಾತ ಉರ್ದು ಭಾಷಿಕರಲ್ಲಿ ಪರಕೀಯ ಭಾವನೆ ಸೃಷ್ಟಿಸಿದರೆ ಅದಕ್ಕೆ ಖಂಡಿತಾ ಉರ್ದುವಿನ ಪ್ರಜಾಸತ್ತಾತ್ಮಕ ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಪ್ರತಿಪಾದಿಸಿದಾಗಲೆಲ್ಲಾ ಹುಯಿಲೆಬ್ಬಿಸುವ ಹಿಂದೀ ಭಾಷಾಂಧರೇ ಕಾರಣ, ಈ ಭಾಷಾಂಧರಿಂದಾಗಿಯೇ ಹಿಂದೀ ಭಾಷೆ ಇನ್ನೂ ದೇಶದ ಸಂಪರ್ಕ ಭಾಷೆಯಾಗಿ ಸ್ವೀಕರಿಸಲ್ಪಟ್ಟಿಲ್ಲ ಎಂಬುದು ಕೂಡಾ ಒಂದು ವಾಸ್ತವ ಸಂಗತಿ.

ಯಾವ ಭಾಷೆಯನ್ನೂ ಒಂದು ಮತ ಸಂಪ್ರದಾಯದೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ. ಆದರೆ ಈಗ ಕೆಲವು ಚಾರಿತ್ರಿಕ ಕಾರಣಗಳಿಂದಾಗಿ ಉರ್ದುವನ್ನು ಒಂದು ನಿರ್ದಿಷ್ಟ ಧಾರ್ಮಿಕ ಅಲ್ಪಸಂಖ್ಯಾತ ಗುಂಪಿನೊಂದಿಗೆ ಗುರುತಿಸುವ ಪ್ರಯತ್ನ ನಡೆಯುತ್ತಿದೆ. ಈ ಸ್ಥಿತಿಗೆ ಉರ್ದು ಭಾಷೆಯಂತೂ ಹೊಣೆಯಲ್ಲ. ಈಗಲೂ ಉರ್ದು ಭಾಷೆಗೆ ಅದೇ ಸಾಮೂಹಿಕ ಸ್ಪಂದನ ದೊರೆಯುತ್ತಿದೆ. ಹಿಂದೀ ಚಿತ್ರಗಳಿಂದು ಸರ್ಟಿಫಿಕೇಟ್ ಪಡೆದರೂ ಉರ್ದು ಭಾಷೆಯಲ್ಲಿರುವ ಚಿತ್ರಗಳು ಈಗಲೂ ಜನಪ್ರಿಯವಾಗಿಲ್ಲವೇ? ಘೆಝುಲ್ ಮತ್ತು ಕವ್ವಾಲಿಗಳು ಈಗಲೂ ಶ್ರೋತೃಗಳ ಹೃದಯವನ್ನು ಮಿಡಿಯುತ್ತಿಲ್ಲವೇ? ಉರ್ದು ಒಂದು ವಿದೇಶಿ ಭಾಷೆಯೆನ್ನುವುದಾದರೆ ಇದು ಹೇಗೆತಾನೇ ಯಾವುದೇ ವಿದೇಶೀ ಭಾಷೆಗೆ ಇಂತಹ ಆಕರ್ಷಣೆ ಸಾಧ್ಯವೇ?

ಒಂದು ಅಂಶವನ್ನು ಸ್ಪಷ್ಟವಾಗಿ ತಿಳಿಯಬೇಕು. ಉರ್ದುವಿನ ವಿರುದ್ಧ ಈ ಪಕ್ಷಪಾತ ಧೋರಣೆ ನಿಲ್ಲದಿದ್ದರೆ ಅದರಿಂದ ದೇಶಕ್ಕೇ, ದೇಶದ ಪ್ರಜಾಪ್ರಭುತ್ವ ಆಂದೋಲನಕ್ಕೇ ಕೇಡು ದುರದೃಷ್ಟವಶಾತ್ ಕೆಲವು ಪ್ರಗತಿಪರ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಕೂಡಾ ಈ ಅಪಾಯವನ್ನು ಅರಿತಿಲ್ಲ.

ಸಿ.ಪಿ.ಐ.(ಎಂ) ನಿರಂತರವಾಗಿ ಉರ್ದುವಿಗೆ ಸರಿಯಾದ ಸ್ಥಾನ ಮಾನ ನೀಡಬೇಕು, ನ್ಯಾಯಬದ್ಧ ಹಕ್ಕುಗಳು ಅದಕ್ಕೆ ದೊರೆಯಬೇಕು ಎಂದು ಹೋರಾಡುತ್ತಾ ಬಂದಿದೆ. ಬಿಹಾರ ಮತ್ತು ಉತ್ತರಪ್ರದೇಶಗಳಲ್ಲಿ ಅದಕ್ಕೆ ಎರಡನೇ ಅಧಿಕೃತ ಭಾಷೆಯ ಸ್ಥಾನಮಾನ ದೊರೆಯಬೇಕೆಂದು ಒತ್ತಾಯಿಸುತ್ತಾ ಬಂದಿದೆ. ತಾನು ಅಧಿಕಾರದಲ್ಲಿರುವ ಪಶ್ಚಿಮಬಂಗಾಳದಲ್ಲಿ ಉರ್ದುಭಾಷಿಕರು ಗಣನೀಯ ಸಂಖ್ಯೆಯಲ್ಲಿರುವ ಪ್ರದೇಶದಲ್ಲೆಲ್ಲಾ ಉರ್ದುವನ್ನು ದ್ವಿತೀಯ ಅಧಿಕೃತ ಭಾಷೆಯನ್ನಾಗಿ ಮಾಡಿದೆ. ಉರ್ದುವಿನ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಪ್ರಮುಖ ಕ್ರಮಕೈಗೊಂಡಿದೆ.

ವಾಸ್ತವವಾಗಿ ಉರ್ದುವಿನ ವಿರುದ್ಧ ಪಕ್ಷಪಾತದ ನಿಲುವಿಗೂ ಅಲ್ಪ ಸಂಖ್ಯಾತರ ಬಗ್ಗೆ ನಿಲುವಿಗೂ ಪರಸ್ಪರ ಸಂಬಂಧವಿದೆ. ಅವರ ನ್ಯಾಯಬದ್ಧ ದೂರುಗಳನ್ನು ಪರಿಹರಿಸದೆ ಅವರನ್ನು ದೇಶದ ಮುಖ್ಯ ಪ್ರವಾಹದಿಂದ ಆಚೆಗೆ ತಳ್ಳಲು ಕೋಮು ಶಕ್ತಿಗಳು ಕಾದುನಿಂತಿವೆ. ಅಲ್ಪ ಸಂಖ್ಯಾತರಲ್ಲಿರುವ ಕೋಮು ಶಕ್ತಿಗಳು ಕೂಡಾ ಇದನ್ನು ಅಸ್ತ್ರವಾಗಿಸಿಕೊಂಡು ಅಲ್ಪಸಂಖ್ಯಾತ ಜನಸಮೂಹಗಳನ್ನು ಪ್ರಜಾಪ್ರಭುತ್ವ ಚಳುವಳಿಯಿಂದ ದೂರ ಸೆಳೆಯಲು ಸನ್ನದ್ಧವಾಗಿವೆ.

ಈ ಸನ್ನಿವೇಶದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಹು ಸಂಖ್ಯಾತ ಮತ್ತು ಅಲ್ಪಸಂಖ್ಯಾತ ಜನಸಮೂಹಗಳನ್ನು ಈ ಶಕ್ತಿಗಳ ಪ್ರಭಾವದಿಂದ ರಕ್ಷಿಸಲು ಹೋರಾಟ ನಡೆಸಬೇಕು. ಅಲ್ಪಸಂಖ್ಯಾತರ ಭಾವನೆಗಳಿಗೆ ಬೆಲೆಕೊಟ್ಟು, ಅವರ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಿದಾಗ ಮಾತ್ರವೇ ಇದೇ ಸಾಧ್ಯ.

ಉರ್ದುವಿನ ಹೆಮ್ಮೆಯ ಪರಂಪರೆಯ ಅರಿವಿರದ ಯುವ ಜನಾಂಗಕ್ಕೆ ಉರ್ದುವಿನ ಚಾರಿತ್ರಿಕ ಪಾತ್ರದ ಬಗ್ಗೆ, ಈಗ ಉರ್ದುವಿನ ಮಹತ್ವದ ಬಗ್ಗೆ ತಿಳಿಸಿ ಪ್ರತಿಗಾಮಿಗಳ ಆಟವನ್ನು ವಿಫಲಗೊಳಿಸುವುದು ಈಗಿನ ತುರ್ತು ಅಗತ್ಯ.

ಊಹಾಪೋಹಗಳನ್ನು ಹುಸಿಗೊಳಿಸಿದ ಗೋರ್ಬಚೆವ್ ಭೇಟಿ

ಗೋರ್ಬಚೆವ್‌ರವರ ಇತ್ತೀಚಿನ ಭಾರತ ಭೇಟಿಯ ಮುನ್ನ ಅದರ ಮಹತ್ವವನ್ನು ಗೌಣಗೊಳಿಸುವ ಬಹಳಷ್ಟು ಪ್ರಯತ್ನಗಳನ್ನು ಪಾಶ್ಚಿಮಾತ್ಯ ಸುದ್ದಿ ಮಾಧ್ಯಮಗಳು ನಡೆಸಿದವು. ಚೀನಾ-ಸೋವಿಯತ್ ಸಂಬಂಧಗಳು ಉತ್ತಮಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಭಾರತ-ಸೋವಿಯತ್ ಅಥವಾ ಭಾರತ-ಚೀನಾ ಸಂಬಂಧಗಳಿಗೆ ಮಹತ್ವ ಬಹಳ ಕಡಿಮೆಯಾಗುತ್ತಿದೆ, ಭಾರತದ ಬಗ್ಗೆ ಸೋವಿಯತ್ ಉತ್ಸಾಹ ಕಡಿಮೆಯಾಗುತ್ತಿದೆ ಎಂದೆಲ್ಲಾ ಅವು ಊಹಾ-ಪೋಹ ಹರಡಿಸಿದ್ದವು. ಗೋರ್ಬಚೆವ್ ಭೇಟಿಯ ಫಲಶ್ರುತಿ ಇವೆಲ್ಲಾ ಊಹಾ-ಪೋಹಗಳನ್ನು ಸುಳ್ಳಾಗಿಸಿದೆ.

ಈ ಭೇಟಿಯಿಂದಾಗಿ ನಮ್ಮೆರಡು ದೇಶಗಳ ನಡುವಿನ ಹಿರಿದ ಸುಮಾರು ನಾಲ್ಕುದಶಕಗಳ ಉತ್ತಮ ಸಂಬಂಧಗಳು ಮತ್ತಷ್ಟು ಮುನ್ನಡೆ ಸಾಧಿಸಿವೆ-ಅಂತರಾಷ್ಟ್ರೀಯ ಸಂಬಂಧಗಳು ಮತ್ತು ಪ್ರಾದೇಶಿಕ ಘರ್ಷಣೆಗಳ ಪ್ರಶ್ನೆಗಳನ್ನು ಕುರಿತಂತೆ ಮಾತ್ರವೇ ಅಲ್ಲ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೂಡಾ.

ಪಾಶ್ಚಿಮಾತ್ಯ ಪತ್ರಿಕೆಗಳ ಪ್ರಚಾರದ ಹೇಳುತ್ತಾ "ಈ ಬದಿಯಿಂದ ಬರುವ ತೊಂದರೆಗಳಿಗೆ ಉತ್ತರ ನೀಡಿ ಅವ್ಯಾಗಿದ್ದದ ಘಟನೆ ಒದಗಿಸಲು ನಾವು ಸಿದ್ಧವಿಲ್ಲ" ಎಂದು ಗೋರ್ಬಚೆವ್ ತಿಳಿಸಿರುವುದು ಎಷ್ಟೊಂದು ನಿಜ ಎಂದು ಭೇಟಿಯ ನಂತರ ಹೊರಡಿಸಲಾದ ಜಂಟಿ ಹೇಳಿಕೆ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

ಮಿಲಿಟರಿ ಶಾಹಿಯನ್ನು, ಪರಸ್ಪರ ಸಂಶಯ ಬೀಜ ಬಿತ್ತುವ ಮಿಲಿಟರಿ ಕೂಟಗಳು ಮತ್ತು ಮಿಲಿಟರಿ ನೆಲೆಗಳನ್ನು ತೀವ್ರವಾಗಿ ವಿರೋಧಿಸುವ ಈ ಹೇಳಿಕೆ ನಿಶ್ಶಸ್ತ್ರೀಕರಣದ, ಮುಖ್ಯವಾಗಿ ಪರಮಾಣು ನಿಶ್ಶಸ್ತ್ರೀಕರಣದ ಪ್ರಕ್ರಿಯೆ ಮುಂದುವರಿಯಬೇಕೆಂದು ಒತ್ತಾಯಿಸಿದೆ.

ಪ್ರಾದೇಶಿಕ ಘರ್ಷಣೆಗಳಿಗೆ ಸಂಬಂಧಪಟ್ಟಂತೆ ಈ ಹೇಳಿಕೆ ಜಿನೇವಾ ಒಪ್ಪಂದಕ್ಕೆ ಬೆಂಬಲ ಸೂಚಿಸಿದೆ; ಕಂಪೂಚಿಯಾದಲ್ಲಿ ರಾಜಕೀಯ ಇತ್ಯರ್ಥ, ಸಮಸ್ತ ಕೊರಿಯಾದ ಜನತೆಯ ಕಲ್ಯಾಣಕ್ಕಾಗಿ ರಚನಾತ್ಮಕ ಮಾತುಕತೆ ಅಗತ್ಯವೆಂದಿದೆ; ಹಿಂದೂ ಮಹಾಸಾಗರವನ್ನು ಶಾಂತಿವಲಯವನ್ನಾಗಿ ಮಾಡಲು 1990ರೊಳಗೆ ಅಂತರಾಷ್ಟ್ರೀಯ ಸಮ್ಮೇಳನ ಕರೆಯಬೇಕೆಂದು ಒತ್ತಾಯಿಸಿದೆ; ಎಲ್ಲಾ ರೀತಿಯ ಜನಾಂಗ ದ್ವೇಷವನ್ನು ಖಂಡಿಸಿದೆ; ಮಧ್ಯ ಅಮೆರಿಕಾದಲ್ಲಿ ಹೊರಗಿನವರ ಹಸ್ತಕ್ಷೇಪವಿಲ್ಲದೆ ರಾಜಕೀಯ ಪರಿಹಾರ ಕಂಡು ಕೊಳ್ಳುವ ಪ್ರಯತ್ನಗಳಿಗೆ ಬೆಂಬಲ ಸೂಚಿಸಿದೆ; ಹೆಚ್ಚುತ್ತಿರುವ ಸಾಲಹೊರೆ ಪರಿಹರಿಸಿ, ಹೊಸ ಆರ್ಥಿಕ ವ್ಯವಸ್ಥೆ ಮೂಡಿಸಲು ಕರೆ ನೀಡಿದೆ.

ಸಾಮ್ರಾಜ್ಯಶಾಹಿಗಳ ವಿರುದ್ಧ ಸಮಾಜವಾದೀ ಬಣದ ಮತ್ತು ಅಲಿಪ್ತ ದೇಶಗಳ ಹಿತಾಸಕ್ತಿ ಹೇಗೆ ಪರಸ್ಪರ ಒಂದುಗೂಡುತ್ತವೆ ಎಂಬುದನ್ನು ಈ ಹೇಳಿಕೆ ಮತ್ತೊಮ್ಮೆ ತೋರಿಸಿಕೊಟ್ಟಿದೆ.

ಭಾರತ, ಚೀನಾ ಮತ್ತು ಸೋವಿಯತ್ ಒಕ್ಕೂಟಗಳ ನಡುವೆ ಉತ್ತಮ ಸಂಬಂಧಗಳು ಈಗ ಘರ್ಷಣೆಗಳ ಆಗರವಾಗಿರುವ ಏಶ್ಯಾ-ಶಾಂತಸಾಗರ ಪ್ರದೇಶದಲ್ಲಿನ ಗಂಭೀರ ವಾತಾವರಣವನ್ನು ತಿಳಿಗೊಳಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ ಎದು ತನ್ನ ಭೇಟಿಯ ಮೊದಲನೇ ದಿನವೇ ಗೋರ್ಬಚೆವ್ ಸ್ಪಷ್ಟವಾಗಿ ಹೇಳಿರುವುದು ಭಾರತದಲ್ಲಿ ಮತ್ತು ಹೊರಗೆ ಸಾಮ್ರಾಜ್ಯಶಾಹೀ- ಪರವಲಯಗಳ ಬಾಯಿ ಮುಚ್ಚಿಸಿದೆ.

ಆರ್ಥಿಕ ರಂಗದಲ್ಲಿ ಇನ್ನಷ್ಟು ಹೊಸ ಒಪ್ಪಂದಗಳು ಈ ಭೇಟಿಯ ಅವಧಿಯಲ್ಲಿ ನಡೆದವು. ತಾಪ ಜಲ ಮತ್ತು ಪರಮಾಣು ವಿದ್ಯುತ್ ವಲಯದಲ್ಲಿನ ಯೋಜನೆಗಳಿಗಾಗಿ ಸುಮಾರು 5300 ಕೋಟಿ ರೂ.ಗಳ ಸಾಲನೀಡಲು ಸೋವಿಯತ್ ಒಕ್ಕೂಟ ಒಪ್ಪಿದೆ. ಇದುವರೆಗಿನ ಅತ್ಯಂತ ದೊಡ್ಡ ಮೊತ್ತದ ಈ ಸಾಲದ ನೆರವಿನಿಂದ 6 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸಬಹುದು. ಜಂಟಿ ಉದ್ಯಮಗಳು, ಎರಡೂ ಕಡೆ ತೆರಿಗೆ ಬೀಳದಂತೆ ವ್ಯವಸ್ಥೆ, ಆರ್ಥಿಕ-ತಾಂತ್ರಿಕ ಸಹಕಾರ ಮತ್ತು ಮುಂದಿನ ವರ್ಷ ವೈಜ್ಞಾನಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ತಜ್ಞರ ವಿನಿಮಯಗಳ ಬಗ್ಗೆ ಒಪ್ಪಂದಗಳು ನಡೆದವು.

ಸಾಂಸ್ಕೃತಿಕ ರಂಗದಲ್ಲಿ— ಎರಡೂ ದೇಶಗಳ ಉತ್ಸವಗಳು ನಮ್ಮೆರಡೂ ಬಹುದೇಶೀಯ ರಾಷ್ಟ್ರಗಳ ಸಾಂಸ್ಕೃತಿಕ ವೈವಿಧ್ಯತೆಯ ಹರಹನ್ನು ಪ್ರತಿನಿಧಿಸಿ ಪರಸ್ಪರ ಸಾಂಸ್ಕೃತಿಕ ಪರಂಪರೆಯನ್ನು ಅರಿತು ಕೊಳ್ಳಲು ನೆರವಾದವು.

ಹೀಗೆ ಗೋರ್ಬಚೆವ್‌ರ ಈ ಭೇಟಿ ಚಿಕ್ಕದಾಗಿದ್ದರೂ, ಅತ್ಯಂತ ಫಲಕಾರಿಯಾಗಿತ್ತು. ಹೊಸದಾಗಿ ವಿಮೋಚನೆಗೊಂಡ ದೇಶಗಳಲ್ಲಿ ಸಾಮ್ರಾಜ್ಯಶಾಹೀ ಹಸ್ತಕ್ಷೇಪದ ವಿರುದ್ಧ ಹೋರಾಡುತ್ತಿರುವ, ಜನಾಂಗದ್ವೇಷದ ವಿರುದ್ಧ ರಾಷ್ಟ್ರೀಯ ವಿಮೋಚನಾ ಸಮರದಲ್ಲಿ ತೊಡಗಿರುವ ಶಕ್ತಿಗಳಿಗೆ ಇದು ಹೊಸ ಪ್ರೋತ್ಸಾಹ ನೀಡಿದೆ.

ಭಾರತ-ಸೋವಿಯತ್ ಸಂಬಂಧಗಳು ಕೇವಲ ಸರ್ಕಾರಗಳ ಮಟ್ಟದಲ್ಲೇ ಉಳಿಯದೆ ಜನತೆಯೂ ಇದರ ಮಹತ್ವ ಅರಿಯುವಂತೆ ಮಾಡುವುದು ಈಗ ದೇಶದ ಪ್ರಜಾಪ್ರಭುತ್ವ ಶಕ್ತಿಗಳ ಜವಾಬ್ದಾರಿ.

ಸಾಮ್ರಾಜ್ಯಶಾಹೀ ದೇಶ ಗಳ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಆರ್ಥಿಕದಲ್ಲಿ ವ್ಯಾಪಕವಾಗಿ ತೂರಲು ಪ್ರಯತ್ನಿಸುತ್ತಿರುವ ಈಗಿನ ಸನ್ನಿವೇಶದಲ್ಲಿ ಸಾಮ್ರಾಜ್ಯ ಶಾಹಿಗಳ ಹೊಸ ಕುತಂತ್ರದ ವಿರುದ್ಧ ಶಕ್ತಿಶಾಲೀ ಆಂದೋಲನ ರೂಪಿಸುವಲ್ಲಿ ಭಾರತ-ಸೋವಿಯತ್ ಸಂಬಂಧಗಳು ಒಂದು ಅಮೂಲ್ಯ ಅಸ್ತ್ರ.

ಆಂಧ್ರ. ಸ್ಪಿನ್ನಿಂಗ್ ಕಾರ್ಮಿಕರ ಬೃಹತ್ ಪ್ರದರ್ಶನ

ಆಂಧ್ರ ಪ್ರದೇಶ ಸಿ.ಐ.ಟಿ.ಯು.ಗೆ ಸಂಯೋಜಿಸಲ್ಪಟ್ಟ ಸ್ಪಿನ್ನಿಂಗ್ ಮಿಲ್ಸ್ ಸಂಘಗಳ ಸಭೆ ನವೆಂಬರ್ 14 ರಂದು ಸೇರಿ 8 ವಿವಿಧ ಸ್ಪಿನ್ನಿಂಗ್ ಮಿಲ್ಸ್‌ಗಳಲ್ಲಿನ ಪರಿಸ್ಥಿತಿ ಕುರಿತು ಚರ್ಚಿಸಿತು. ಆಂಧ್ರಪ್ರದೇಶ ಸ್ಪಿನ್ನಿಂಗ್ ಮಿಲ್ಸ್ ಫೆಡರೇಶನ್‌ನ ಅಸಮರ್ಥ ಆಡಳಿತ ವ್ಯವಸ್ಥೆ ಬಂಡವಾಳ ಹೂಡುವಿಕೆ, ಮಾರಾಟ, ರಫ್ತು ನೀತಿಯ ಫಲವಾಗಿ ಫ್ಯಾಕ್ಟರಿಯಲ್ಲಿ ನಿರಂತರ ಲೇಆಫ್ ಮಾಡಿ ತಿಂಗಳುಗಟ್ಟಲೇ ಕಾರ್ಮಿಕರಿಗೆ ಮತ್ತು ಬದಲೀ ಕಾರ್ಮಿಕರಿಗೆ ಕೆಲಸ ನಿರಾಕರಿಸಿ ಸಾವಿರಾರು ಕಾರ್ಮಿಕರು ಬೀದಿಪಾಲಾಗಿದ್ದಾರೆ. ಸ್ಪಿನ್ನಿಂಗ್ ...ಕರ ಸಮಸ್ಯೆ ಕುರಿತು ಸರ್ಕಾರ ಕೂಡಲೇ ಮಧ್ಯಪ್ರವೇಶಿಸ ಬೇಕೆಂದು ಒತ್ತಾಯಿಸಲು ನವೆಂಬರ್ 21ರಂದು ರಾಜಧಾನಿ ಹೈದರಾಬಾದ್‌ನಲ್ಲಿ ಕಾರ್ಮಿಕರ ಬೃಹತ್ ಮತಪ್ರದರ್ಶನಕ್ಕೆ ಕರೆ ನೀಡಿತು.

ವ್ಯಾಪಕ ಪ್ರಚಾರ ಕಾರ್ಯ ಕೈಗೊಂಡ ಕಾರ್ಮಿಕರು ಎಲ್ಲಾ ಕಾರ್ಖಾನೆಗಳ ಮುಂದೆ ಗೇಟ್ ಮೀಟಿಂಗ್, ಸಾರ್ವಜನಿಕರ ಸಭೆಗಳನ್ನು ನಡೆಸಿ ಸಹಸ್ರಾರು ಕರ ಪತ್ರಗಳ ಮೂಲಕ ಸಕಲಸಿದ್ಧತೆ ನಡೆಸಿದರು. ಇಷ್ಟೊಂದು ವಿಶಾಲ ಪ್ರಚಾರದಿಂದ ಪ್ರಭಾವಿತರಾದ ಎ.ಐ.ಟಿ.ಯು.ಸಿ. ಟಿ.ಎನ್.ಟಿ.ಯು.ಸಿ. ಹಾಗೂ ಐ.ಎನ್.ಟಿ.ಯು.ಸಿಯ ನಾಯಕತ್ವದ ಸಂಘಗಳು ಸಹ ಬೇರೆ ದಾರಿಯಿಲ್ಲದೆ ಈ ಪ್ರದರ್ಶನದಲ್ಲಿ ಪಾಲ್ಗೊಳ್ಳುವಂತೆಯಾಯಿತು.

ಆದಿಲಾಬಾದ್‌ನ ಸ್ವತಂತ್ರ ಕಾರ್ಮಿಕರ ಸಂಘವು ಸಹಜೊತೆಗೂಡಿತು. ಬಹುತೇಕ ಕಾರ್ಖಾನೆಯ ಎಲ್ಲ ಕಾರ್ಮಿಕರು ರ್‍ಯಾಲಿಗೆ ಭಾಗವಹಿಸಲು ಲಾರಿಗಳಲ್ಲಿ ಬಸ್ಸುಗಳಲ್ಲಿ ವಿವಿಧೆಡೆಗಳಿಂದ ಬಂದು ಹೈದರಾಬಾದ್‌ನಲ್ಲಿ ಸಂಗಮವಾದರು. ಆಂಧ್ರದಲ್ಲಿ ಟೆಕ್ಸ್‌ಟೈಲ್ಸ್ ಕಾರ್ಮಿಕರ 15 ವರ್ಷಗಳ ಚಳವಳಿಯಲ್ಲಿಯೇ ಕಂಡರಿಯದಂತಹ ರಾಜ್ಯಮಟ್ಟದ ಮತಪ್ರದರ್ಶನವಿದಾಗಿತ್ತೆಂದು ಗುರುತಿಸಲಾಗಿದೆ.

ಆಂಧ್ರ ಸರ್ಕಾರದ ಟೆಕ್ಸ್‌ಟೈಲ್ಸ್ ಮಂತ್ರಿ ಹಾಗೂ ಕಮಿಷನರ್ ರವರಿಗೆ ಮನವಿ ಅರ್ಪಿಸಿ 26 ದಿನಗಳ ಖಾಯಂ ಉದ್ಯೋಗ, ಬಟ್ಟೆರಪ್ಪು, ವೇತನ ಪರಿಷ್ಕರಣ, ಕೆಲಸದ ಪರಿಸ್ಥಿತಿ ಕುರಿತು ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಚರ್ಚಿಸಬೇಕೆಂದು ಒತ್ತಾಯಿಸಲಾಯಿತು. ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು ಬೇಡಿಕೆಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ಸಮಸ್ಯೆ ಪರಿಹರಿಸಲು ಎಲ್ಲಾ ಕ್ರಮವಹಿಸುವುದಾಗಿ ಆಶ್ವಾಸನೆ ನೀಡಿ ಟ್ರೇಡ್ ಯೂನಿಯನ್ ಮುಖಂಡರೊಡನೆ ದೀರ್ಘಮಾತುಕತೆ ನಡೆಸುವುದಾಗಿ ತಿಳಿಸಿದರು.

ಆಂಧ್ರ ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಕಾ॥ಪರಸಾ ಸತ್ಯನಾರಾಯಣ ರವರು ಮಾತನಾಡಿ ಬೇಡಿಕೆ ಬಗ್ಗೆ ನಿರ್ಲಕ್ಷ್ಯ ತೋರಿದೆ ಆದರೆ ರಾಜ್ಯದಲ್ಲಿ ಕೈಗಾರಿಕಾ ಚಳುವಳಿ ನಡೆಸುವುದು ಅನಿವಾರ್ಯವೆಂದು ಎಚ್ಚರಿಸಿದರು. ಸಿ.ಐ.ಟಿ.ಯು. ಕಾರ್ಯದರ್ಶಿ ಕಾ॥ವಿ.ಶ್ರೀಹರಿಯವರು ಮನವಿ ಅರ್ಪಿಸಿದರು. ಸ್ಪಿನ್ನಿಂಗ್ ಕಾರ್ಮಿಕರ ಮುಖಂಡರುಗಳು, ಶಾಸಕರು, ಎ.ಐ.ಟಿ.ಯು.ಸಿ., ಟಿ.ಎನ್.ಟಿ.ಯು.ಸಿ., ಐ.ಎನ್.ಟಿ.ಯು.ಸಿ. ಮುಖಂಡರುಗಳು ಮಾತನಾಡಿದರು.

ಹಣಕೊಟ್ಟವರಿಗೆ ಪಂಗನಾಮ

ಸಿಂಧನೂರಿನ ಆರ್.ಡಿ.ಸಿ.ಸಿ. ಬ್ಯಾಂಕ್ ಮೇನ್‌ಬ್ರಾಂಚ್ ನಾಗರೀಕರಿಂದ ವ್ಯಾಪಾರಿಗಳಿಂದ, ಕೈ ಕಸುಬುದಾರರಿಂದ ಎತ್ತಿದ ಒಗ್ಗಿ ಹಣ ಸಿಬ್ಬಂದಿಯ ಅವ್ಯವಹಾರದಿಂದ ಗಳ್ಳಂಗೊಂಡಿದೆ. ಈ ಅವ್ಯವಹಾರದ ಬಗ್ಗೆ ಕುಟಿನಡೆಸಿ ಜನರಿಂದ ಸಂಗ್ರಹಿಸಿದ ಹಣವನ್ನು ಹಿಂತಿರುಗಿಸ ಬೇಕೆಂದು ಸೆಪ್ಟೆಂಬರ್ 1986 ರಿಂದಲೂ ಹೋರಾಟ ನಡೆಸುತ್ತಿರುವ ಡಿ.ವೈ.ಎಫ್.ಐ. ಹಲವು ಹಂತ ಹಂತದ ಹೋರಾಟ ನಡೆಸುತ್ತಾ ಬಂದಿದರಿಂದ ವಿಚಾರಣೆ ಎಂಬ ನಾಟಕವೊಂದು 2 ತಿಂಗಳು ನಡೆದು ಕೊಪ್ಪಳದ ಸಹಾಯಕ ರೀಜಿಸ್ಟ್ರರ್ ವಿಚಾರಣೆಯಲ್ಲಿ1.70 ಲಕ್ಷ ಅವ್ಯವಹಾರ ನಡೆದಿದೆ ಎಂಬ ತೀರ್ಮಾನಕ್ಕೆ ಬಂದು ಬ್ಯಾಂಕಿನ ವ್ಯವಸ್ಥಾಪಕರು ಸೇರದಂತೆ 4 ಮಂದಿ ಸಿಬ್ಬಂದಿಯನ್ನು ವಜಾಮಾಡಲಾಗಿದೆಯೇ ವಿನಹ ಹಣ ನೀಡಿದ ಜನತೆಗೆ ಇನ್ನೂ ಆಕಾಶ, ಸ್ವರ್ಗ ತೋರಿಸಿ ಜಿಲ್ಲಾ ಪ್ರಧಾನ ವ್ಯವಸ್ಥಾಪಕರ ಆದೇಶಕ್ಕಾಗಿ ಕಾದು ನೋಡಿ ಎಂದು ಹೇಳುತ್ತಾ ಹೋರಟದ್ದಾರೆ.

ಈ ಅವ್ಯವಹಾರದ ವಿರುದ್ಧ ಹೋರಾಟ ಸಮಿತಿ ಮುಂದಿನ ಹಂತದ ಹೋರಾಟವಾಗಿ ಬ್ಯಾಂಕ್ ಪಿಕೆಟಿಂಗ್, ಬಂದ್, ಅಧ್ಯಕ್ಷರ ಮನೆ ಮುಂದೆ ಸತ್ಯಾಗ್ರಹ, ಅಮರಣಾಂತ ಸತ್ಯಾಗ್ರಹ ನಡೆಸುವುದೆಂದು ನಿರ್ಧರಿಸಲಾಗಿದೆ.

ಸಿ.ಐ.ಟಿ.ಯು. ಹೋರಾಟಗಳು

ದಾಂಡೇಲಿ:

ಉತ್ತರಕನ್ನಡ ಜಿಲ್ಲೆ ದಾಂಡೇಲಿ ಕೈಗಾರಿಕಾ ಕೇಂದ್ರದ ಸಿ.ಐ.ಟಿ.ಯು.ಗೆ ಸೇರಿದದಾಂಡೇಲಿಯ ಪ್ಲಾಯವುಡ್, ಡಿ.ಎಫ್.ಎ. ಪೇಪರ್‌ಮಿಲ್ ಹಾಗೂ ಐ.ಪಿ.ಸಿ.ಯ ಕಾರ್ಮಿಕರು ಅಕ್ಟೋಬರ್ 31ರಂದು ದಾಂಡೇಲಿಯಲ್ಲಿ ಬೃಹತ್ ಮತಪ್ರದರ್ಶನವನ್ನು ನಡೆಸಿ ಸಂಡೇ ಮಾರ್ಕೆಟ್ ವೃತ್ತದಲ್ಲಿ ಬಹಿರಂಗ ಸಭೆನಡೆಸಿದರು.

ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಂಖಂಡರಾದ ಕಾ॥ವಿ.ಎನ್.ಹಳಕಟ್ಟಿ, ನಿತ್ಯಾನಂದಸ್ವಾಮಿ, ಯವರುಗಳು ಮಾತನಾಡಿ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠವೇತನ ಜಾರಿಗೊಳಿಸುವಲ್ಲಿ ತೋರಿಸುತ್ತಿರುವ ನಿರ್ಲಕ್ಷನೀತಿಯನ್ನು ತೀವ್ರವಾಗಿ ಖಂಡಿಸಿ ಸಂಘಟಿತ ಕಾರ್ಮಿಕರು ಅಸಂಘಟಿತ ಕಾರ್ಮಿಕರನ್ನು ಸಂಘಟಿಸಿ ಐಕ್ಯವಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಡಿ.ಎಫ್.ಎ. ಕಾರ್ಖಾನೆಯಲ್ಲಿ 8 ಮಂದಿ ಕಾರ್ಮಿಕರನ್ನೂ ಸಸ್ಪಂಡ್ ಮಾಡಿ, ಡಿ.ಎ., ಮನೆ ಬಾಡಿಗೆ ಮುಂತಾದ ಬೇಡಿಕೆ ಬಗ್ಗೆ ಚಕಾರವೆತ್ತದೆ 6 ವರ್ಷದ ಒಡಂಬಡಿಕೆಗೆ ಸಹಿಮಾಡಿದ ಕಾರ್ಮಿಕ ನಾಯಕ ಪ್ರೊ.ಕೆ.ಎಸ್.ಶರ್ಮಾನ ಕಾರ್ಮಿಕರ ವಿರೋಧಿ ನೀತಿಯನ್ನು ಸಭೆಯಲ್ಲಿ ತೀವ್ರವಾಗಿ ಖಂಡಿಸಲಾಯಿತು. ಇದೇ ಶರ್ಮಾ ಹುಬ್ಬಳ್ಳಿಯಲ್ಲಿವಿವಿಧ ಕಾರ್ಮಿಕ ಸಂಘಗಳಲ್ಲಿ ಮಾಲೀಕರ ಏಜೆಂಟನಾಗಿ ರಹಸ್ಯ ಒಪ್ಪಂದಗಳ ಮೂಲಕ ಕಾರ್ಮಿಕರಿಗೆ ಬಗೆದಿರುವ ದ್ರೋಹವನ್ನು ಕಾ॥ಹಳಕಟ್ಟಿಯವರು ಬಯಲಿಗೆಳೆದರು. ಇವನ ಅನ್ಯಾಯದ ವಿರುದ್ಧ ಬೇಸತ್ತ ಕಾರ್ಮಿಕರು ಸಿ.ಐ.ಟಿ.ಯು.ಗೆ ಸೇರುತ್ತಿದ್ದಾರೆ ಎಂದು ಹೇಳಿ ದಾಂಡೇಲಿಯ ಕಾರ್ಮಿಕರು ಶರ್ಮಾನ ಮೋಸಕ್ಕೆ ಬಲಿಯಾಗದೇ ಎಚ್ಚೆತ್ತು ಇತನಿಗೆ ಸರಿಯಾದ ಪಾಠ ಕಲಿಸಬೇಕೆಂದು ಕರೆ ನೀಡಿದರು.

ಗುಡಿಸಲು ವಾಸಿಗಳ ಸಂಘದ ಸಭೆ

ದಾಂಡೇಲಿಯ ಗುಡಿಸಲು ವಾಸಿಗಳ ಸಭೆ ಕಾ॥ಭೀಮರಾವ್ ಎಸ್.ಜೇರಟಗಿ ಯವರ ಅಧ್ಯಕ್ಷತೆಯಲ್ಲಿ ಜರುಗಿತು. ಇಲ್ಲಿಯ ಬಡಜನತೆಗೆ ನಾಗರೀಕ ಸೌಲಭ್ಯ ಬೇಕು ಹಾಗೂ ವಾಸಿಸಲು ಮನೆಗಳನ್ನು ಕಟ್ಟಿ ಕೊಡಬೇಕೆಂದು ಒತ್ತಾಯಿಸಲಾಯಿತು. ಇಲ್ಲಿನ ಸಂಘಕ್ಕೆ ಕಾ॥ಭೀಮರಾವ್ ಎಸ್.ಜೇರಟಗಿ (ಅಧ್ಯಕ್ಷ) ಮಹಮದ್ ಇಸಾಖ ಈರಾಪೂರ (ಉಪಾಧ್ಯಕ್ಷ) ರಾಮಯ್ಯ (ಸಂಘಟನಾ ಕಾರ್ಯದರ್ಶಿ)ಯ ಬಸೀರ ಅಹಮದ್ (ಕಾರ್ಯದರ್ಶಿ)ಯಾಗಿ ಆಯ್ಕೆಗೊಂಡಿರುತ್ತಾರೆ.

ಚಿಕ್ಕಮಗಳೂರು

ಸಿ.ಐ.ಟಿ.ಯು. ರಾಜ್ಯ ಮಂಡಳಿ ಕರೆಯಂತೆ ಅಕ್ಟೋಬರ್ 31ರಂದು ಚಿಕ್ಕಮಗಳೂರಿನ ಮೂರು ಕಾಫಿ ಕ್ಯೂರಿಂಗ್‌ನ ಕಾರ್ಮಿಕರು ಮುಷ್ಕರ ನಡೆಸಿದರು. 250 ಮಹಿಳೆಯರನ್ನು ಒಳಗೊಂಡ ಬೃಹತ್ ರ್‍ಯಾಲಿಯೊಂದನ್ನು ನಗರದಲ್ಲಿ ನಡೆಸಿ ಕಾಫಿ ಕ್ಯೂರಿಂಗ್ ಪ್ಲೈವುಡ್ ಹಾಗೂ ಇನ್ನಿತರ ಕೈಗಾರಿಕೆಗಳಲ್ಲಿ ರಾಜ್ಯ ಸರ್ಕಾರ ಕನಿಷ್ಠ ಕೂಲಿ, ತುಟ್ಟಿಭತ್ಯೆ ಪ್ರಕಟಿಸಿದರೂ ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಸಿ.ಐ.ಟಿ.ಯು. ರಾಜ್ಯ ಪ್ರ.ಕಾರ್ಯದರ್ಶಿ ಹಾಗೂ ಕಾಫಿ ಕ್ಯೂರಿಂಗ್ ಮತ್ತು ಇನ್ನಿತರ ಸಂಘದ ಅಧ್ಯಕ್ಷರಾದ ಕಾ॥ಸಿ.ನಂಜುಂಡಪ್ಪನವರು ಹಾಗೂ ಸಂಘದ ಕಾರ್ಯದರ್ಶಿ ಕಾ॥ಕೆ.ವಿಶ್ವನಾಥ, ಎ.ಸಿ.ಕೇಶವ ರವರುಗಳು ಮಾತನಾಡಿದರು. ಮನವಿಯನ್ನು ಜಿಲ್ಲಾಧಿಕಾರಿಯವರಿಗೂ ಹಾಗೂ ಕಾರ್ಮಿಕ ಆಯುಕ್ತರಿಗೂ ಅರ್ಪಿಸಲಾಯಿತು.

ವ್ಯಕ್ಯರಂಗ

1989

	ಜನವರಿ	ಫೆಬ್ರವರಿ	ಮಾರ್ಚ್
ಭಾನು	1 8 15 22 29	5 12 19 26	5 12 19 26
ಸೋಮ	2 9 16 23 30	6 13 20 27	6 13 20 27
ಮಂಗಳ	3 10 17 24 31	7 14 21 28	7 14 21 28
ಬುಧ	4 11 18 25	1 8 15 22	1 8 15 22 29
ಗುರು	5 12 19 26	2 9 16 23	2 9 16 23 30
ಶುಕ್ರ	6 13 20 27	3 10 17 24	3 10 17 24 31
ಶನಿ	7 14 21 28	4 11 18 25	4 11 18 25

	ಏಪ್ರಿಲ್	ಮೇ	ಜೂನ್
ಭಾನು	30 2 9 16 23	7 14 21 28	4 11 18 25
ಸೋಮ	3 10 17 24	1 8 15 22 29	5 12 19 26
ಮಂಗಳ	4 11 18 25	2 9 16 23 30	6 13 20 27
ಬುಧ	5 12 19 26	3 10 17 24 31	7 14 21 28
ಗುರು	6 13 20 27	4 11 18 25	1 8 15 22 29
ಶುಕ್ರ	7 14 21 28	5 12 19 26	2 9 16 23 30
ಶನಿ	1. 8 15 22 29	6 13 20 27	3 10 17 24

	ಜುಲೈ	ಆಗಸ್ಟ್	ಸೆಪ್ಟೆಂಬರ್
ಭಾನು	30 2 9 16 23	6 13 20 27	3 10 17 24
ಸೋಮ	31 3 10 17 24	7 14 21 28	4 11 18 25
ಮಂಗಳ	4 11 18 25	1 8 15 22 29	5 12 19 26
ಬುಧ	5 12 19 26	2 9 16 23 30	6 13 20 27
ಗುರು	6 13 20 27	3 10 17 24 31	7 14 21 28
ಶುಕ್ರ	7 14 21 28	4 11 18 25	1 8 15 22 29
ಶನಿ	1 8 15 22 29	5 12 19 26	2 9 16 23 30

	ಅಕ್ಟೋಬರ್	ನವೆಂಬರ್	ಡಿಸೆಂಬರ್
ಭಾನು	1 8 15 22 29	5 12 19 26	31 3 10 17 24
ಸೋಮ	2 9 16 23 30	6 13 20 27	4 11 18 25
ಮಂಗಳ	3 10 17 24 31	7 14 21 28	5 12 19 26
ಬುಧ	4 11 18 25	1 8 15 22 29	6 13 20 27
ಗುರು	5 12 19 26	2 9 16 23 30	7 14 21 28
ಶುಕ್ರ	6 13 20 27	3 10 17 24	1 8 15 22 29
ಶನಿ	7 14 21 28	4 11 18 25	2 9 16 23 30

ಜನವರಿ	1,	1959	ಕ್ಯೂಬಾ ಕ್ರಾಂತಿ
ಜನವರಿ	11,	1946	ಅಲ್ಬೇನಿಯಾ ಜನತಾ ಗಣತಂತ್ರ
ಜನವರಿ	11,	1979	ಕಂಪೂಚಿಯಾ ಜನತಾ ಗಣತಂತ್ರ
ಜನವರಿ	15,	1936	ಎ.ಐ.ಕೆ.ಎಸ್.ಸ್ಥಾಪನೆ
ಜನವರಿ	21,	1924	ಲೆನಿನ್ ನಿಧನ
ಮಾರ್ಚ್	5,	1953	ಸ್ಟಾಲಿನ್ ನಿಧನ
ಮಾರ್ಚ್	8,	1917	ಅಂತರ್ರಾಷ್ಟ್ರೀಯ ಮಹಿಳಾ ದಿನ
ಮಾರ್ಚ್	14,	1883	ಮಾರ್ಕ್ಸ್ ನಿಧನ
ಮಾರ್ಚ್	22,	1977	ಎ.ಕೆ.ಜಿ. ನಿಧನ
ಮಾರ್ಚ್	29,	1943	ಕಯ್ಯೂರು ಕಮ್ಯುನಿಸ್ಟರಿಗೆ ಗಲ್ಲು
ಏಪ್ರಿಲ್	4,	1945	ಹಂಗೇರಿ ವಿಮೋಚನೆ
ಏಪ್ರಿಲ್	22,	1870	ಲೆನಿನ್ ಜನ್ಮದಿನ
ಏಪ್ರಿಲ್	30,	1975	ದಕ್ಷಿಣ ವಿಯೆಟ್ನಾಂ ವಿಮೋಚನೆ
ಮೇ	1,	1890	ಅಂತರಾಷ್ಟ್ರೀಯ ಕಾರ್ಮಿಕ ದಿನ
ಮೇ	5,	1818	ಮಾರ್ಕ್ಸ್ ಜನ್ಮದಿನ
ಮೇ	8,	1945	ಜರ್ಮನಿ ವಿಮೋಚನೆ
ಮೇ	9,	1945	ಜೆಕೊಸ್ಲೊವಾಕಿಯಾ ವಿಮೋಚನೆ
ಮೇ	13,	1970	ಸಿ.ಐ.ಟಿ.ಯು.ಸ್ಥಾಪನೆ
ಮೇ	15,	1922	ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಮುಖಪತ್ರಿಕೆ ಆರಂಭ
ಮೇ	19,	1985	ಪಿ.ಸುಂದರಯ್ಯ ನಿಧನ
ಜೂನ್	2,	1976	ವಿಯೆಟ್ನಾಂ ಸಮಾಜವಾದೀ ಗಣತಂತ್ರ
ಜೂನ್	27,	1965	"ಪೀಪಲ್ಸ್ ಡೆಮಾಕ್ರಸಿ"ಆರಂಭ
ಜುಲೈ	11,	1921	ಮಂಗೋಲಿಯಾ ಕ್ರಾಂತಿ
ಜುಲೈ	11,	1960	ಜೆಕೊಸ್ಲೊವಾಕಿಯಾ ಸಮಾಜವಾದಿ ಗಣತಂತ್ರ
ಜುಲೈ	22,	1944	ಪೋಲೆಂಡ್ ರಾಷ್ಟ್ರೀಯ ದಿನ
ಆಗಸ್ಟ್	5,	1889	ಮುಜಫರ್ ಅಹ್ಮದ್ ಜನ್ಮದಿನ
ಆಗಸ್ಟ್	20,	1949	ಹಂಗೇರಿ ಜನತಾ ಗಣತಂತ್ರ
ಆಗಸ್ಟ್	21,	1965	ರುಮಾನಿಯಾ ಸಮಾಜವಾದಿ ಗಣತಂತ್ರ
ಸೆಪ್ಟೆಂಬರ್	1,		ಅಂತರರಾಷ್ಟ್ರೀಯ ಶಾಂತಿ ದಿನ
ಸೆಪ್ಟೆಂಬರ್	9,	1944	ಬಲ್ಗೇರಿಯಾ ಸಮಾಜವಾದಿ ಕ್ರಾಂತಿ
ಸೆಪ್ಟೆಂಬರ್	9,	1948	ಕೊರಿಯಾ ಜನತಾ ಗಣತಂತ್ರ
ಸೆಪ್ಟೆಂಬರ್	15,	1946	ಬಲ್ಗೇರಿಯಾ ಜನತಾ ಗಣತಂತ್ರ
ಅಕ್ಟೋಬರ್	1,	1949	ಚೀನಾ ಜನತಾ ಗಣತಂತ್ರ
ಅಕ್ಟೋಬರ್	7,	1949	ಜರ್ಮನ್ ಜನವಾದಿ ಗಣತಂತ್ರ
ನವೆಂಬರ್	7,	1917	ಮಹಾನ್ ಅಕ್ಟೋಬರ್ ಕ್ರಾಂತಿ
ನವೆಂಬರ್	28,	1820	ಎಂಗೆಲ್ಸ್ ಜನ್ಮದಿನ
ನವೆಂಬರ್	29,	1944	ಅಲ್ಬೇನಿಯಾ ವಿಮೋಚನೆ
ನವೆಂಬರ್	29,	1945	ಯುಗೊಸ್ಲಾವಿಯಾ ಜನತಾ ಗಣತಂತ್ರ
ಡಿಸೆಂಬರ್	2,	1979	ಲಾವೋಸ್ ಜನತಾ ಗಣತಂತ್ರ
ಡಿಸೆಂಬರ್	21,	1879	ಸ್ಟಾಲಿನ್ ಜನ್ಮದಿನ
ಡಿಸೆಂಬರ್	30,	1922	ಸೋವಿಯೆತ್ ಒಕ್ಕೂಟ ಸ್ಥಾಪನೆ
ಡಿಸೆಂಬರ್	30,	1947	ರುಮಾನಿಯಾ ಜನತಾ ಗಣತಂತ್ರ



ನಾವು ಖಡ್ಗಗಳ ಬಡಿದು ನೇಗಿಲ ಮಾಡುವೆವು

ನಿಜ ಹೊಣೆಗಾರರು ತಪ್ಪಿಸಿಕೊಳ್ಳದಿರಲಿ

ಸಿ.ಪಿ.ಐ.(ಎಂ) ಮತ್ತು ಎಡ ಶಕ್ತಿಗಳ ಪ್ರಭಾವ ಭಾರತದ ರಾಜಕೀಯದಲ್ಲಿ ಹೆಚ್ಚುತ್ತಿದೆ. ಇದು ಪಕ್ಷ ಅಮೂಲ್ಯ ಜೀವಗಳ ಬಲಿದಾನ ನೀಡಿ ದೇಶದ ಐಕ್ಯತೆಗಾಗಿ ನಡೆಸಿದ ಧೀರ ಹೋರಾಟದ ಫಲ ಎಂದಿದ್ದ 13 ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ. ಇದಕ್ಕೆ ಇತ್ತೀಚಿನ ಉದಾಹರಣೆ ತ್ರಿಪುರಾ ಮತ್ತು ಡಾರ್ಜಿಲಿಂಗ್. ದೇಶದ ಬಹುಪಾಲು ಸಾರ್ವಜನಿಕಾಭಿಪ್ರಾಯ ಈ ವಿಷಯಗಳಲ್ಲಿ ಸಿ.ಪಿ.ಐ.(ಎಂ) ನಿಲುವನ್ನು ಬೆಂಬಲಿಸಿರುವುದು ಕಂಡು ಬಂದಿದೆ. ಇಲ್ಲಿ ಪ್ರಕಟಿಸಿರುವ ಲೇಖನ ಇದಕ್ಕೊಂದು ಮಾದರಿ. ಪ್ರಸಿದ್ಧ ನ್ಯಾಯವಾದಿ ಶ್ರೀ.ಎ.ಜಿ.ನೂರಾಣಿಯವರು ಇಂಡಿಯನ್ ಎಕ್ಸ್‌ಪ್ರೆಸ್ ದೈನಿಕದಲ್ಲಿ (ಅಕ್ಟೋಬರ್ 13, 1988) ಬರೆದ ಲೇಖನದ ಅನುವಾದ ಇದು.

ಹಲವಾರು ಪ್ರಶ್ನೆಗಳನ್ನು ಕುರಿತಂತೆ ಭಾರತ ಸರಕಾರ ವ್ಯವಸ್ಥಿತವಾಗಿ ಶುದ್ಧ ಮೋಸ ಮತ್ತು ಸುಳ್ಳಿನ ಕಂತೆಗಳ ದಾರಿ ಹಿಡಿಯುತ್ತಿರುವುದು ಆತಂಕಕಾರಿ. ಇವೆಲ್ಲಾ ಅತ್ಯಂತ ಸೂಕ್ಷ್ಮ ಪ್ರಶ್ನೆಗಳು. ಈ ಪ್ರತಿಯೊಂದರಲ್ಲೂ ಮೊತ್ತ ಮೊದಲ ಅಪಾದನೀಯ ವ್ಯಕ್ತಿಯೆಂದರೆ ಸ್ವತಃ ಪ್ರಧಾನಮಂತ್ರಿ ರಾಜೀವ ಗಾಂಧಿಯವರೇ.

ಮಿಜೋರಾಂನ ಪಾಕ್ಷಿಕ ಪತ್ರಿಕೆ "ಝೊಯೆಂಗ್" ಆಗಸ್ಟ್ 22, 1988 ರಂದು ಪ್ರಕಟಿಸಿದ ರಾಜೀವ ಗಾಂಧಿ ಮತ್ತು ಟಿ.ಎನ್.ವಿ. ಮುಖಂಡ ಬಿಜೊಯ್‌ಕುಮಾರ್ ಹ್ರಾಂಗ್‌ಖಾವ್ಲ್ ನಡುವೆ 1987 ರ ಅಕ್ಟೋಬರ್‌ನಿಂದ ಡಿಸೆಂಬರ್ ನಡುವಿನ ಗುಪ್ತ ಮಾತುಕತೆಗಳ ಕುರಿತಾದ ವಿವರವಾದ ಮಾಹಿತಿಗಳನ್ನು ಕಂಡಾಗ ತ್ರಿಪುರಾದ ಜನತೆಗೆ ಮತ್ತು ದೇಶಕ್ಕೂ ಎಂತಹ ಅಗಾಧ ಪ್ರಮಾಣದ ವಂಚನೆ ನಡೆಸಲಾಯಿತು ಎಂಬುದು ಸಿದ್ಧವಾಗುತ್ತದೆ. ಫೆಬ್ರವರಿ 2, 1988 ರ ಚುನಾವಣೆಗಳು ಒಂದು ನೀಚ ನಾಟಕ ಎಂಬುದು ಬಯಲಾಗಿದೆ. ಆಗಸ್ಟ್ 12 1988 ರಂದು ನವದೆಹಲಿಯಲ್ಲಿ ಸಹಿ ಹಾಕಿದ ಭಾರತ ಸರ್ಕಾರ ಮತ್ತು ಟಿ.ಎನ್.ವಿ. ನಡುವಿನ ಒಪ್ಪಂದ ಒಂದು ದೊಡ್ಡ ತಮಾಷೆ. ಸಂಸತ್ತಿಗೆ ಸುಳ್ಳು ಹೇಳಲಾಯಿತು. ತಾನು ಸರ್ಕಾರದ ಅಧೀನವಿಲ್ಲ ಎಂದು ಹೇಳಿದ ಮುಖ್ಯ ಚುನಾವಣಾ ಆಯುಕ್ತರದ್ದು ಕೇವಲ ನಟನೆ ಎಂದು ಸಿದ್ಧವಾಗಿದೆ.

ಈ ಘಟನೆಯನ್ನು ಇತ್ತೀಚಿನ ವರ್ಷಗಳಲ್ಲಿ ಗೂರ್ಖಾಲ್ಯಾಂಡ್ ಚಳುವಳಿ, ಮುಸ್ಲಿಂ ಮಹಿಳಾ ಶಾಸನ, ಮಾನನಷ್ಟ ಮಸೂದೆ ಮತ್ತು ಈಗ ಸಿದ್ಧವಾಗುತ್ತಿರುವ ಚುನಾವಣಾ ಸುಧಾರಣಾ ಮಸೂದೆ ಮುಂತಾದ ಗಂಭೀರ ಪ್ರಶ್ನೆಗಳನ್ನು ಕುರಿತಂತೆ ಹೇಳಲಾದ ಸುಳ್ಳಿನ ಸರಮಾಲೆಗಳ ಹಿನ್ನೆಲೆಯಲ್ಲಿ ನೋಡಿದಾಗ ಒಂದು ಚಿತ್ರ ಸ್ಪಷ್ಟವಾಗಿ ಮೂಡಿ ಬರುತ್ತದೆ. ಅದೆಂದರೆ ಕಾಂಗ್ರೆಸ್(ಐ) ಮತ್ತು ಅದರ ಮುಖಂಡ ರಾಜೀವಗಾಂಧಿಯ ಹಿತಾಸಕ್ತಿ ಬೆಳೆಸಲು ಮೋಸದ ಮೂಲಕ ಆಳ್ವಿಕೆಯ ಒಂದು ವ್ಯವಸ್ಥಿತ ವಿಧಾನ ಅನುಸರಿಸಲಾಗುತ್ತಿದೆ ಎನ್ನುವುದು.

ವ್ಯವಸ್ಥೆಯ ಬಿಕ್ಕಟ್ಟು ಪಕ್ವವಾಗುತ್ತಾ ಹೋದಂತೆ....

ದೇಶದ ನೆತ್ತಿಯ ಮೇಲೆ ತುರ್ತುಪರಿಸ್ಥಿತಿಯ ತೂಗುಕತ್ತಿ 59ನೇ ಸಂವಿಧಾನ ತಿದ್ದುಪಡಿ ಟೀಕೆಯ ಸ್ವಾತಂತ್ರ್ಯ ಹಾಗೂ ಭ್ರಷ್ಟ ಮಂತ್ರಿಗಳನ್ನು ಬಯಲಿಗೆಳೆಯುವ ಸ್ವಾತಂತ್ರ್ಯವನ್ನೆಲ್ಲಾ ಹಿಸುಕಿ ಹಾಕುವ ಉದ್ದೇಶ ಹೊಂದಿದ್ದ ಮಾನಹಾನಿ ಮಸೂದೆ, ರಾಜ್ಯಗಳಲ್ಲಿ ಕಗ್ಗಿವಾಡ್ಗಳ ಮೂಲಕ ಆಳ್ವಿಕೆ, ಸಾಮೂಹಿಕ ಆಂದೋಲನಗಳ ವಿರುದ್ಧ ರಾಷ್ಟ್ರೀಯ ಭದ್ರತಾ ಶಾಸನ, ತ್ರಿಪುರಾದ ಚುನಾವಣೆಗಳನ್ನು ಹುಸಿಗೊಳಿಸಿ ಭಯೋತ್ಪಾದಕ ಆಳ್ವಿಕೆಯ ಸ್ಥಾಪನೆಯ ಜೊತೆಗೆ ಬುಡಕಟ್ಟು ಜನಗಳ ಹಕ್ಕುಗಳ ಮೇಲೆ ಕಾರ್ಮಿಕ ಸಂಘಗಳ ನ್ಯಾಯಬದ್ಧತೆಯ ಮೇಲೆ ಹಲ್ಲೆಗಳು ರಾಜೀವ್ ಸರ್ಕಾರದ ಸರ್ವಾಧಿಕಾರೀ ಪ್ರವೃತ್ತಿ ಮುಂದುವರಿಯುತ್ತಿರುವುದರ ದ್ಯೋತಕಗಳು. ಈಗಿನ ವ್ಯವಸ್ಥೆಯ ಬಿಕ್ಕಟ್ಟು ಪಕ್ವವಾಗುತ್ತಾ ಹೋದಂತೆ ಸಂಸದೀಯ ಪ್ರಜಾಸತ್ತೆ ಮತ್ತು ಜನತೆಯ ಹಕ್ಕುಗಳ ಮೇಲೆ ಸತತ ಹಲ್ಲೆಗಳು ನಡೆಯುತ್ತವೆ.

ಪರಿಚ್ಛೇದ - 2.36
13ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ

ಸುಳ್ಳಿನ ಕಂತೆಗಳು

ಮಿಜೋರಾಂನ ಪತ್ರಿಕೆ ಬಯಲಿಗೆ ತಂದ ಗುಪ್ತ ಮಾತುಕತೆಗಳ ಪತ್ರ ವ್ಯವಹಾರಗಳ ಹಿನ್ನೆಲೆಯಲ್ಲಿ ಬಹಿರಂಗವಾಗಿ ಹೇಳಲಾದ ಸುಳ್ಳುಗಳ ಕಂತೆಗಳನ್ನು ಪರಿಶೀಲಿಸೋಣ. ಅಕ್ಟೋಬರ್ 27 ರಂದು ಟಿ.ಎನ್.ವಿ. ಮುಖಂಡ ಪ್ರಧಾನ ಮಂತ್ರಿಗಳಿಗೆ ಎರಡು ಶರತ್ತುಗಳ ಮೇಲೆ ಸಿ.ಪಿ.ಐ.(ಎಂ) ನೇತೃತ್ವದ ಸರಕಾರದ ವಜಾ ಮತ್ತು ಯುದ್ಧ ವಿರಾಮ) ಮಾತುಕತೆಯ ಬಗ್ಗೆ ಪತ್ರ ಬರೆದಿದ್ದನೆಂದು ಮಿಜೋರಾಂ ಪತ್ರಿಕೆ ಬಯಲಿಗೆ ತಂದಿದೆ. ಆದರೆ ನವೆಂಬರ್ 28 ರಂದು ಅಗರ್ತಲಾದಲ್ಲಿ ಇಂತಹ ಯಾವುದೇ ಶಾಂತಿ ಪ್ರಸ್ತಾಪ ಬಂದಿಲ್ಲ ಎಂದು ಪ್ರಧಾನ ಮಂತ್ರಿಗಳು ಏಕ್‌ದಂ ನಿರಾಕರಿಸಿರುವುದು ದಾಖಲೆಯಾಗಿದೆ!

ಮಿಜೋರಾಂ ಪತ್ರಿಕೆ ಬಯಲಿಗೆ ತಂದ ಪತ್ರ ವ್ಯವಹಾರಗಳ ಪ್ರಕಾರ ಟಿ.ಎನ್.ವಿ. ಭಾರತ ಸರಕಾರದ ನಡುವಿನ ಮಾತುಕತೆಗಳಿಗೆ ಮಧ್ಯವರ್ತಿಯಾಗಿದ್ದ ಮಿಜೋರಾಂ ಕಾಂಗ್ರೆಸ್ (ಐ) ಮುಖಂಡ ಲಾಲ್ಥನ್ ಹಾವ್ಲಾ ಡಿಸೆಂಬರ್ 6 ರಂದು ಟಿ.ಎನ್.ವಿ. ಮುಖಂಡನಿಗೆ ಬರೆದ ಪತ್ರದಲ್ಲಿ ತಾನು ಮತ್ತು ಪ್ರಧಾನ ಮಂತ್ರಿ ನವೆಂಬರ್ 28 ರಂದು ತ್ರಿಪುರಾಕ್ಕೆ ಭೇಟಿಯಿತ್ತ ಬಗ್ಗೆ, ಫೆಬ್ರವರಿ 2 ರಂದು ತ್ರಿಪುರಾ ಚುನಾವಣೆಯಿರುವುದರಿಂದ ನವದೆಹಲಿಗೆ ತಕ್ಷಣ ಏನೂ ಮಾಡಲು ಸಾಧ್ಯವಿಲ್ಲ. ತ್ರಿಪುರಾದಲ್ಲಿ 'ನಾವು ಅಧಿಕಾರದಲ್ಲಿ ಇಲ್ಲದಿರುವುದರಿಂದ' ಇದು ಇನ್ನಷ್ಟು ಕಷ್ಟ. ಚುನಾವಣೆ ಮುಗಿಯುವವರೆಗೆ ಪರಿಸ್ಥಿತಿ ಸೂಕ್ತವಲ್ಲ ಎಂದೆಲ್ಲಾ ಬರೆದಿದ್ದರು.

ಜನವರಿ 4, 1988 ರಂದು ಗೃಹ ಮಂತ್ರಿ ಬೂಟಾಸಿಂಗ್ ಯಾರೂ ನಂಬಲಾರದ ಕೆಲಸ ಮಾಡಿದರು. ತ್ರಿಪುರಾ ಮುಖ್ಯ ಮಂತ್ರಿ ನೃಪೇನ್ ಚಕ್ರವರ್ತಿಯವರೊಂದಿಗೆ ಅಗರ್ತಲಾದಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಇದರ ಪ್ರಕಾರ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಟ್ಟಾಗಿ ಕಾನೂನು ಬಾಹಿರ ಟಿ.ಎನ್.ವಿ.ಯ ಭಯೋತ್ಪಾದನೆಯನ್ನು ಎದುರಿಸುತ್ತವೆ ಎಂದು ಹೇಳಲಾಯಿತು. ಈ ಅನಗತ್ಯ ಒಪ್ಪಂದದ ಬಗ್ಗೆ ವಿವರ ನೀಡುತ್ತಾ 'ನಮ್ಮಿಬ್ಬರ ಶತ್ರುವೂ ಒಂದೇ ಅದರ ವಿರುದ್ಧ ಈ ಹೋರಾಟ' ಎಂದರು ಬೂಟಾಸಿಂಗ್! ಇದು ಕೇವಲ ಮೋಸದ ಪರದೆ ಎಂದು ನಂತರ ತಿಳಿದು ಬಂತು. ಜನವರಿ 29 ರಂದು ನವದೆಹಲಿ ಸಂಪೂರ್ಣ ರಾಜ್ಯವನ್ನೇ "ಗಲಭೆ ಪೀಡಿತ ಪ್ರದೇಶ" ಎಂದು ಘೋಷಿಸಿತು. ಚುನಾವಣೆಯ ನಾಲ್ಕು ದಿನಗಳ ಮೊದಲು ಸೇನೆಯನ್ನು ನಿಲ್ಲಿಸಿತು.

ಯಾರಿಗೆ ಮೋಸ?

ಈ ಘೋಷಣೆಯ ಕೆಲವು ಗಂಟೆಗಳ ಮೊದಲಷ್ಟೇ ಟಿ.ಎನ್.ವಿ. ಜತೆಗೆ ಯಾವುದೇ ಮಾತುಕತೆಯಿಲ್ಲ ಎಂದು ಅಗರ್ತಲಾದಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ರಾಜೀವಗಾಂಧಿ ದೃಢವಾಗಿ ತಳ್ಳಿ ಹಾಕಿದ್ದರು. ಮಾತುಕತೆಯ ಪ್ರಶ್ನೆಯೇ ಇಲ್ಲವೆಂದ ಅವರು ಬದಲಾಗಿ ಅದನ್ನು ಚಚ್ಚಿಹಾಕುವುದಾಗಿ ಗುಡುಗಿದರು. ಮಿಜೋರಾಂನಂತೆ ಟಿ.ಎನ್.ವಿ. ಜತೆಗೆ ಯಾವುದೇ ಒಪ್ಪಂದ ಸಾಧ್ಯವಿಲ್ಲವೆಂದು ನಿರ್ದಿಷ್ಟವಾಗಿ ಕೂಡ ಹೇಳಿದರು. ರಾಜ್ಯ ಸರ್ಕಾರ ಸಮಸ್ಯೆ ಎದುರಿಸುವಲ್ಲಿ ಸಹಕಾರ ನೀಡುತ್ತಿಲ್ಲ ಎಂಬ ಅವರ ಆಪಾದನೆಯನ್ನೇನೋ ಚುನಾವಣಾ ಪ್ರಚಾರದ ಭಾಗವೆನ್ನಬಹುದು. ಆದರೆ ತಾನು ಈಗಾಗಲೇ ಕೈಮಿಲಾಯಿಸಿರುವ ಒಂದು ಸಂಘಟನೆಯನ್ನು 'ಚಚ್ಚಿಹಾಕುವ' ಪ್ರತಿಜ್ಞೆ ಅದಾಗಲೇ ಚುನಾವಣೆಗಳ ನಂತರ ಮಾತುಕತೆಗಳ ಗುಪ್ತ ಭರವಸೆ ನೀಡಿರುವಾಗ ಈ ಸಂಘಟನೆಯೊಂದಿಗೆ ಯಾವುದೇ ಮಾತುಕತೆಯ ಪ್ರಶ್ನೆಯೇ ಇಲ್ಲ ಎಂಬ ಘೋಷಣೆ ಇವನ್ನೆಲ್ಲಾ ಏನೆಂದು ವರ್ಣಿಸೋಣ? ಒಂದೋ ಅವರು ಟಿ.ಎನ್.ವಿ.ಗೆ ಮೋಸ ಮಾಡುತ್ತಿರಬೇಕು ಅಥವಾ ತ್ರಿಪುರಾದ ಜನತೆಯನ್ನು ಮೋಸ ಮಾಡುತ್ತಿರಬೇಕು. ಅವರು ತ್ರಿಪುರಾ ಜನತೆಗೇ ಮೋಸ ಮಾಡಿದರು ಎಂದು ಈಗ ಸ್ಪಷ್ಟವಾಗಿದೆ.

ತ್ರಿಪುರಾ ಚುನಾವಣೆ ದಿನಾಂಕದ ಬಗ್ಗೆ ಲಾಲ್ಥನ್‌ಹಾವ್ಲಾ ಡಿಸೆಂಬರ್ 6 ರಂದು ಟಿ.ಎನ್.ವಿ. ಮುಖಂಡರಿಗೆ ತಿಳಿಸಿದ್ದರು. ಆದರೆ ತ್ರಿಪುರಾ ಸರ್ಕಾರಕ್ಕೂ ಕೂಡ ಇದು ತಿಳಿದದ್ದು ಡಿಸೆಂಬರ್ 26 ರಂದು. ಅದರ ಅಧಿಕೃತ ಘೋಷಣೆಯ ದಿನದಂದು! ಶ್ರೀಮಾನ್ ಪೆರಿಶಾಸ್ತ್ರಿಯವರು ನವ ದೆಹಲಿಗೆ ಇದನ್ನು ಮುಂಗಡವಾಗಿಯೇ ತಿಳಿಸಿ ದ್ದರು. ಅದನ್ನು ನವದೆಹಲಿ ಲಾಲ್ಥನ್ ಹಾವ್ಲಾ ಮೂಲಕ ಟಿ.ಎನ್.ವಿ.ಗೆ ತಿಳಿಸಿತು ಎನ್ನುವುದು ಸ್ಪಷ್ಟ. ಮುಖ್ಯ ಚುನಾವಣಾ ಆಯುಕ್ತರ 'ಸ್ವಾತಂತ್ರ್ಯ'ದ ಬಗ್ಗೆ ಇಷ್ಟೇ ಸಾಕಲ್ಲವೇ? ತ್ರಿಪುರಾ ವಿಧಾನಸಭಾ ಚುನಾವಣಾ ಹೋರಾಟ ಟಿ.ಎನ್.ವಿ. ವಿಪತ್ತಿನ ಪ್ರಶ್ನೆಯ ಮೇಲೆ ನಡೆದಿತ್ತು. ಕೇಂದ್ರ ಗೃಹ ಇಲಾಖೆಯ ವರದಿಯ ಪ್ರಕಾರ 1987 ರಲ್ಲಿ ಟಿ.ಎನ್.ವಿ. 75 ಮಂದಿಯನ್ನು ಕೊಂದಿದ್ದಾರೆ. ತ್ರಿಪುರಾ ಚುನಾವಣೆಯ ಮೊದಲು ಹಿಂಸಾಚಾರ ಹೆಚ್ಚಿಸಿ ಕೇವಲ ಜನವರಿ 1988ರ ಒಂದು ತಿಂಗಳಲ್ಲೇ 98 ಮಂದಿಯನ್ನು ಕೊಂದಿತ್ತು. ಆದರೆ ತ್ರಿಪುರಾ ಒಪ್ಪಂದದ ನಂತರ ಟಿ.ಎನ್.ವಿ. ಮುಖಂಡ ಹ್ರಾಂಗ್‌ಖಾವ್ಲಾ ನೀಡಿದ ಹೇಳಿಕೆ ಚಕಿತಗೊಳಿಸುವಂತದ್ದು. ಆಗಸ್ಟ್ 18 ರಂದು ಅಗರ್ತಲಾದಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ ಹ್ರಾಂಗ್‌ಖಾವ್ಲಾ ಚುನಾವಣೆಯ ಮೊದಲು "ಟಿ.ಎನ್.ವಿ.ಯ ಹೆಸರಿನಲ್ಲಿ ಬಹಳ ಜನರನ್ನು ಕೊಲ್ಲಲಾಯಿತು." ಎಂದರು. ಟಿ.ಎನ್.ವಿ.ಯ ಹೆಸರಲ್ಲಿ ಕೊಲೆ ಮಾಡಿದ ನಿಜವಾದ ಕೊಲೆಗಾರರು ಯಾರು ಎಂದು ಹೇಳಲು ಅವರು ನಿರಾಕರಿಸಿದರು.

ಇದೇ ತಂತ್ರ

ಗೂರ್ಖಾಲ್ಯಾಂಡ್ ಚಳವಳಿ ಸಂದರ್ಭದಲ್ಲಿ ಇದೇ ತಂತ್ರ ಬಳಸಿದ್ದು ಕಂಡು ಬಂತು. ಮೊದಲ ದಿನದಿಂದಲೇ ಪಶ್ಚಿಮ ಬಂಗಾಳ ಸರ್ಕಾರ ಪ್ರಾದೇಶಿಕ ಸ್ವಾಯತ್ತತೆ ಕೊಡುವ ಪಕ್ಷದಲ್ಲಿತ್ತು. ಸಿ.ಪಿ.ಐ.(ಎಂ) ನ ಆನಂದಪಾಠಕ್ ಲೋಕಸಭೆಯಲ್ಲಿ ಎರಡು ಮಸೂದೆಗಳನ್ನು ಮಂಡಿಸಿದ್ದರು. 1988 ರ ಆಗಸ್ಟ್ 22 ರಂದು ಆದ ಡಾರ್ಜಿಲಿಂಗ್ ಘೂರ್ಖ ಗುಡ್ಡಗಾಡು ಮಂಡಳಿ ಒಪ್ಪಂದ ಈ ಪರಿಕಲ್ಪನೆಯ ಮೇಲೆಯೇ ನಿಂತಿದೆ. ಅಂದರೆ 1986 ರಲ್ಲಿ ಈ ಚಳವಳಿ ಆರಂಭವಾದಾಗಲೇ ಈ ಒಪ್ಪಂದ ಸಾಧ್ಯವಿತ್ತು. ಆದರೆ ರಾಜ್ಯ ಸಭೆಯಲ್ಲಿ ಮಾತನಾಡುತ್ತಾ "ಪ್ರಾದೇಶಿಕ ಸ್ವಾಯತ್ತತೆ ಪ್ರತ್ಯೇಕ ರಾಜ್ಯದತ್ತ ಮೊದಲ ಹೆಜ್ಜೆಯೆಂದು ಸಿ.ಪಿ.ಐ.(ಎಂ) ಮುಖಂಡರಿಗೆ ಗೊತ್ತಿಲ್ಲವೇ?" ಎಂದು ಹೇಳಿ ರಾಜೀವ ಗಾಂಧಿ ಇದನ್ನು ತಳ್ಳಿಹಾಕಿದ್ದರು. ಮತ್ತೆ ಡಾರ್ಜಿಲಿಂಗ್ ಭೇಟಿಯ ಸಮಯದಲ್ಲಿ ಡಿಸೆಂಬರ್ 20, 1986 ರಂದು ಅವರು ಇದನ್ನು ಪುನರುಚ್ಚರಿಸಿದ್ದರು.

ಹೀಗೆ ಒಂದೆಡೆ ಒಪ್ಪಂದದ ಏಕಮಾತ್ರ ಆಧಾರವನ್ನು ತಿರಸ್ಕರಿಸುತ್ತಾ ಇನ್ನೊಂದೆಡೆ ಅವರು ಇತ್ಯರ್ಥಕ್ಕೆ ಬರುವ ರಾಜ್ಯ ಸರ್ಕಾರದ ಪ್ರಯತ್ನಗಳ ಬಗ್ಗೆ ಬೈಗುಳ ಸುರಿಮಳೆಗರೆಯುತ್ತಾ ಹೋದರು. ಜಿ.ಎನ್.ಎಲ್.ಎಫ್‌ನ್ನು ಅತ್ಯಾಚಾರಗಳ ಆಪಾದನೆಯಿಂದ ಉಳಿಸಲು ಅತ ಪ್ರಯತ್ನಿಸಿದರು. ಈಗಲೂ ಪ್ರಯತ್ನಿಸುತ್ತಿದ್ದಾರೆ.

ಎರಡು ವರ್ಷ ಈ ಪ್ರದೇಶವನ್ನು ಹಾಳುಗೆಡವಿದ ಮೇಲೆ ಈ ಒಪ್ಪಂದ ಹೇಗಾಯಿತು?

ರಾಜೀವಗಾಂಧಿಯವರ ವಿಚಾರ ಸರಣಿಯ ಅನುಭೂತಿ ಹೊಂದಿರುವ ಒಬ್ಬ ಪತ್ರಿಕಾ ಪ್ರತಿನಿಧಿ ಜುಲೈ 14, 1988ರಂದು ಮಾಡಿದ ಈ ವರದಿಯನ್ನು ನೋಡಿ "ಮಾರ್ಕ್ಸ್‌ವಾದೀ ಸರಕಾರಕ್ಕೆ ಕಿರುಕುಳ ಕೊಡಬೇಕೆಂದಿದ್ದ ಕೇಂದ್ರ ಸರಕಾರ ಹಿಂಸಾಚಾರದ ಬಗ್ಗೆ ತೋರಿದ ಪರೋಕ್ಷ ಸಹನೆ ಯಿಂದಾಗಿಯೇ ಘೀಸಿಂಗ್ ತನ್ನ ಚಳವಳಿಯನ್ನು ಇಷ್ಟೊಂದು ಪ್ರಮಾಣದಲ್ಲಿ ಹರಡಲು ಸಾಧ್ಯವಾಯಿತು ಎಂದು ಈಗ ಒಪ್ಪಲಾಗುತ್ತಿದೆ. ಈಗ ಕೇಂದ್ರಕಷ್ಟೇ ತಿಳಿದಿರುವ ನಿಗೂಢ ಕಾರಣಕ್ಕಾಗಿ ಅದು ಘೀಸಿಂಗ್ ಮೇಲೆ ಒತ್ತಡ ತಂದು ಹಿಂಸಾಚಾರ ನಿಲ್ಲಿಸಿ ಒಂದು ಶೀಘ್ರ ಶಾಂತಿಯುತ ಇತ್ಯರ್ಥಕ್ಕಾಗಿ ಬಸು ಜೊತೆಗೆ ಮಾತುಕತೆಗೆ ಕೂರಬೇಕೆಂದು ಹೇಳಿದೆ."

ತ್ರಿಪುರಾದಂತೆ ಇಲ್ಲಿಯೂ ಸ್ವಾರ್ಥಪರ ಉದ್ದೇಶಗಳಿಗಾಗಿ ಮೋಸದ ವರ್ತನೆ ಅದೂ ಜನರಿಗೆ ತೊಂದರೆಯುಂಟು ಮಾಡಿ.

ಪಂಜಾಬ್ ಮತ್ತು ಅಸ್ಸಾಂ ಒಪ್ಪಂದಗಳ ಬಗ್ಗೆ ಹೇಳಲಂತೂ ಪ್ರತ್ಯೇಕ ಸಮಯವನ್ನೇ ಮೀಸಲಿಡಬೇಕು. 1986ರ ಮುಸ್ಲಿಂ ಮಹಿಳಾ ಶಾಸನದ

5 ನೇ ಪುಟನೋಡಿ

ಜನವರಿ 21,1989 ರಂದು ತಮಿಳುನಾಡು ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಸಿ.ಪಿ.ಐ(ಎಂ) ಅಭ್ಯರ್ಥಿಗಳ ಪಟ್ಟಿ

1	ಎನ್.ಶಂಕರಯ್ಯ	ಮಧುರೈ(ಪೂರ್ವ)
2	ಡಬ್ಲ್ಯು.ಆರ್.ವರದರಾಜನ್	ವಿಳ್ಳಿವಾಕ್ಕಂ
3	ಸಿ.ಗೋವಿಂದರಾಜನ್	ನೆಲ್ಲಿಕುಪ್ಪಂ
4	ಜಿ.ವೀರಯ್ಯನ್	ನಾಗಪಟ್ಟಿಣಂ
5	ವಿ.ತಂಬುಸಾಮಿ	ತಿರುವಾರೂರ್
6	ಪಾಪಾ ಉಮಾನಾಥ್	ತಿರುವೆರುಂಬೂರ್
7	ಎಸ್.ಎ.ತಂಗರಾಜನ್	ದಿಂಡುಕ್ಕಲ್
8	ಎಸ್.ಪಳನಿವೇಲ್	ಪಳನಿ
9	ಆರ್.ಕೃಷ್ಣನ್	ವಾಸುದೇವನಲ್ಲೂರ್
10	ಎಂ.ಪಾಂಡಿಯನ್	ಅಪ್ಪಾಸಮುದ್ರಂ
11	ಜೆ.ಹೇಮಚಂದ್ರನ್	ತಿರುವೆಟ್ಟಾರ್
12	ಟಿ.ರಮಣಿ	ಕೊಯಮತ್ತೂರು(ಪೂರ್ವ)
13	ಎಸ್.ನೂರ್‌ಮಹಮದ್	ಪದ್ಮನಾಭ ಪುರಂ
14	ಕೆ.[illegible]	ವಿಳವಂಗೋಡು
15	ಯು.ಕೆ.ವೆಳ್ಳಿಂಗಿರಿ	ತೊಂಡಾಮುತ್ತೂರು
16	ಸಿ.ಗೋವಿಂದಸ್ವಾಮಿ	ತಿರುಪ್ಪೂರ್
17	ಎಂ.ಶ್ರಿರಂಗನ್	ಮೆಟ್ಟೂರು
18	ವಿ.ರಾಮಸ್ವಾಮಿ	ತಿರುಚೆಂಗೋಡು
19	ಅಣ್ಣಾಮಲೈ	ಅರೂರು
20	ಕೆ.ಆರ್.ಸುಂದರಂ	ಗುಡಿಯಾತ್ತಂ
21	ಟಿ.ಡಿ.ಕಮಲಾಕ್ಷನ್	ಗೂಡಲೂರು

ದೇಶದ ಐಕ್ಯತೆ ಕಾದುಕೊಳ್ಳುವ ಏಕೈಕ ಮಾರ್ಗ

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಮತ್ತು ನಮ್ಮ ಪಕ್ಷ ಜಿ.ಎನ್.ಎಲ್.ಎಫ್.ನ ಪ್ರತ್ಯೇಕತಾವಾದಿ ಸವಾಲನ್ನು ಎದುರಿಸಿ ಆಂದೋಲನವನ್ನು ನಿಲ್ಲಿಸಿದ ರೀತಿ ರಾಷ್ಟ್ರೀಯ ಐಕ್ಯತೆಗೆ ಒಂದು ಗಣನೀಯ ಕೊಡುಗೆ. ಆಂದೋಲನದ ದ್ವಿಮುಖ ಸ್ವಭಾವವನ್ನು ಅದು ಅರ್ಥಮಾಡಿಕೊಂಡಿತು. ಈ ಪ್ರದೇಶದ ಹಿಂದುಳಿಕೆ ಮತ್ತು ಜನತೆಯ ಪ್ರಾಮಾಣಿಕ ಬೇಡಿಕೆಗಳನ್ನು ಮತ್ತು ಇನ್ನೊಂದೆಡೆ ಪ್ರತ್ಯೇಕತಾವಾದಿ ಭಾವೋದ್ವೇಗ ಬಡಿದೆಬ್ಬಿಸುವ ಮಂದಿ ಈ ಬೇಡಿಕೆಗಳನ್ನು ಛಿದ್ರಕಾರಿ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಂಡಿತು. ಆದ್ದರಿಂದ ಜನತೆಯ ನಡುವೆ ರಾಜಕೀಯ ಪ್ರಚಾರಕ್ಕೆ ಪಕ್ಷ ಮತ್ತು ಅದರ ಕಾರ್ಯಕರ್ತರು ಧುಮುಕಿದರು. ಧೈರ್ಯದಿಂದ ಭಯೋತ್ಪಾದಕರನ್ನು ಎದುರಿಸಿದರು. ವೀರಾವೇಶದಿಂದ ಅವರನ್ನು ಎದುರಿಸಿ 80 ನೇಪಾಳೀ ಸಂಗಾತಿಗಳು ಹುತಾತ್ಮರಾದರು. ಅದೇವೇಳೆಗೆ ಕಾನೂನು-ವ್ಯವಸ್ಥೆಯ ಯಂತ್ರದ ಮೂಲಕ ಕಿಡಿಗೇಡಿತನಕ್ಕೆ ಇಳಿದವರನ್ನು ನೋಡಿಕೊಂಡಿತು.

ಈ ರೀತಿ ಅಸಂತೃಪ್ತ ಜನಸಮೂಹಗಳು ಮತ್ತು ವಿಚ್ಛಿದ್ರಕಾರಿ ಮುಖಂಡತ್ವದ ನಡುವೆ ವ್ಯತ್ಯಾಸ ಕಾಣುವುದೇ ಜಿ.ಎನ್.ಎಲ್.ಎಫ್‌ನ್ನು ಎದುರಿಸಿ ದೇಶದ ಐಕ್ಯತೆ ಕಾಯ್ದುಕೊಳ್ಳುವ ಏಕೈಕ ಮಾರ್ಗವಾಗಿತ್ತು.

ಪರಿಚ್ಛೇದ 2.78,
ಕರಡು ವರದಿಯಿಂದ

ಪ್ರಶ್ನೆ: 'ಯುವಸಾರಣಿ' ಮಲಯಾಳಂ ಮಾಸಿಕದ ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಸಂದರ್ಶನವೊಂದರಲ್ಲಿ ನಕ್ಸಲೈಟ್ ಮುಖಂಡರಾದ ಕೆ.ವೇಣು ವ್ಯಕ್ತಪಡಿಸಿದ ಅಭಿಪ್ರಾಯ ಈ ರೀತಿ ಇದೆ.

"ರಶ್ಯಾದಲ್ಲಿ ನಡೆಯುತ್ತಿರುವ ಬಂಡವಾಳಶಾಹಿ ಪುನರ್ರಚನೆಗೆ ಒಟ್ಟಾರೆಯಾಗಿ ಬೆಂಬಲಿಸುವಂತಹ ನಿಲುವನ್ನು ಸಿ.ಪಿ.ಐ ಮತ್ತು ಸಿ.ಪಿ.ಐ.(ಎಂ)ಗಳು ತೆಗೆದುಕೊಂಡಿವೆ. ಸಿ.ಪಿ.ಐ.(ಎಂ) 1964 ಮತ್ತು 1977 ರ ಸಮಯದಲ್ಲಿ ಸೋವಿಯತ್ ಯೂನಿಯನ್ ಪರಿಷ್ಕರಣವಾದೀ ನೀತಿಯನ್ನು ಅನುಸರಿಸುತ್ತಿದೆಯೆಂಬುದು ಹಾಗಿ ಹೇಳುತ್ತಿದ್ದು ಆದರೆ ಅದು ಸಂದರ್ಭಾನುಕೂಲವಾಗಿ ಆ ನಿಲುವಿನಿಂದ ಹಿಂದೆ ಸರಿಯಿತು. ಹೆಚ್ಚು ಕಡಿಮೆ ಸೋವಿಯತ್ ನೀತಿಯನ್ನು ಅಂಗೀಕರಿಸಿತು. ಇವತ್ತು ಸಿ.ಪಿ.ಐ.(ಎಂ)ನ ನಾಯಕತ್ವದೊಳಗೆ ಸೋವಿಯತ್ ಪುನರ್ರಚನೆ ಕುರಿತು ಭಿನ್ನಾಭಿಪ್ರಾಯ ಇದೆ. ಆದರೆ ಅಂತರಿಕವಾಗಿ ಇವರು ರಾಜಿಮಾಡಿಕೊಂಡಿದ್ದಾರೆಂದು ಅನಿಸುತ್ತದೆ. ಗೋರ್ಬಚೆವ್‌ರ ನಿಲುವು ಸ್ವಾಗತಾರ್ಹವೆಂದು ಇ.ಎಂ.ಎಸ್, ಅದು ಮೂಲಭೂತವಾಗಿ ವೈಯುಕ್ತಿಕವಾದುದೆಂದು ಬಿ.ಟಿ.ಆರ್. ಮತ್ತು ಅವರ ಗುಂಪು ಹೇಳುತ್ತಿದ್ದು ಇವರಿಬ್ಬರ ನಡುವೆ ಹೊಂದಾಣಿಕೆ ನಡೆಸಲು ಸಿ.ಪಿ.ಐ.(ಎಂ) ನಾಯಕತ್ವ ಶ್ರಮಿಸುತ್ತಿದೆ....

ನೀವು ಮತ್ತು ಕಾ॥ಬಿ.ಟಿ.ಆರ್ ರವರು ವೈಯುಕ್ತಿಕ ಅಭಿಪ್ರಾಯಗಳನ್ನು ಪಕ್ಷದ ವೇದಿಕೆಯ ಹೊರಗೆ ವ್ಯಕ್ತಪಡಿಸಿದ್ದರಿಂದ ತಾನೇ ವೇಣು ಅಂಥವರು ಈ ರೀತಿ ಗೇಲಿ ಮಾಡಲು ಅವಕಾಶ ಸಿಕ್ಕಿದ್ದು. ನೀವುಗಳು ಈ ರೀತಿ ನಡೆದುಕೊಳ್ಳುವುದು ಸರಿಯೇ?

-- ಸೇತು ಮಾಧವನ್
ತುರುವಂಗರ



ಇ.ಎಂ.ಎಸ್.
ಪ್ರಶ್ನೋತ್ತರ

ನಿರಾಧಾರ ಅನುಮಾನ

ಅನೇಕ ಕಮ್ಯುನಿಸ್ಟ್ ವಿರೋಧಿಗಳಂತೆಯೇ ವೇಣು ಕೂಡ ಸಿ.ಪಿ.ಐ.(ಎಂ)ನ ಅಧಿಕೃತ ದಾಖಲೆಗಳನ್ನು ಅಭ್ಯಾಸ ಮಾಡದೆ ಬಂಡವಾಳಶಾಹೀ ಪತ್ರಿಕೆಗಳಲ್ಲಿ ಪ್ರಕಟವಾಗುವ ತಿರುಚಿದ ಸುದ್ದಿಗಳನ್ನು ಮತ್ತು ಆ ಸುದ್ದಿಗಳ ತಲೆಬರಹಗಳನ್ನು ಮಾತ್ರ ಓದಿಕೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಉದಾಹರಣೆಗೆ ಬೇರೆಯವರ ಹಾಗೆಯೇ ಅವರೂ ಕೂಡ ಇ.ಎಂ.ಎಸ್. ಮತ್ತು ಬಿ.ಟಿ.ರಣದಿವೆ ನಡುವೆ ಬಿನ್ನಾಭಿಪ್ರಾಯ ಇದೆ ಎಂದು ಹೇಳಿದ್ದಾರಲ್ಲವೇ? ವಾಸ್ತವವಾಗಿ ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ಅವಿರೋಧವಾಗಿ ಅಂಗೀಕರಿಸಿದ ಎರಡು ನಿರ್ಣಯಗಳಿವೆ. ಮೊದಲ ನಿರ್ಣಯದಲ್ಲಿ ಅಂತರಾಷ್ಟ್ರೀಯ ರಂಗದಲ್ಲಿನ ಮುಖ್ಯ ವೈರುಧ್ಯಗಳನ್ನು ಅಂದಾಜು ಮಾಡುವ ಸಮಯದಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಕುರಿತು ಸಿ.ಪಿ.ಐ.(ಎಂ)ನ ಅಭಿಪ್ರಾಯ ವ್ಯತ್ಯಾಸಗಳನ್ನು ವ್ಯಕ್ತಪಡಿಸಲಾಗಿದೆ. ಅದೇ ಸಮಯದಲ್ಲಿ ಇವತ್ತಿನ ಪ್ರಮುಖ ಅಂತರಾಷ್ಟ್ರೀಯ ಸಮಸ್ಯೆಯಾದ ವಿಶ್ವಶಾಂತಿಗೆ ಸಂಬಂಧಿಸಿದಂತೆ ಸೋವಿಯತ್ ಪಕ್ಷ ಅನುಸರಿಸುವ ನಿಲುವಿಗೆ ನಮ್ಮ ಪಕ್ಷ ಸಂಪೂರ್ಣವಾಗಿ ಬೆಂಬಲ ಸೂಚಿಸಿದೆ. ಎರಡನೆಯ ನಿರ್ಣಯದಲ್ಲಿ ಸೋವಿಯತ್ ಪಕ್ಷ ಮತ್ತು ಸರ್ಕಾರ ಜಾರಿಗೊಳಿಸುತ್ತಿರುವ ಆರ್ಥಿಕ ಮತ್ತು ರಾಜಕೀಯ ಪುನರ್ರಚನೆ ಸಮಾಜವಾದೀ ನಿರ್ಮಾಣವನ್ನು ಬಲಪಡಿಸುತ್ತಿದೆಂಬುದಾಗಿ ಅಂದಾಜು ಮಾಡಲಾಗಿದೆ. ಅದೇ ಸಮಯದಲ್ಲಿ ಈ ಪುನರ್ರಚನೆಯಲ್ಲಿ ಪ್ರತಿಯೊಂದನ್ನೂ ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದಲ್ಲಿ ಪರಿಶೀಲಿಸಿ ಏನಾದರೂ ತಪ್ಪುಗಳು ಕಂಡು ಬಂದರೆ ಅದನ್ನು ಸೋವಿಯತ್ ಪಕ್ಷಕ್ಕೆ ತಿಳಿಸುವುದಕ್ಕೆ ಹಿಂಜರಿಯುವುದಿಲ್ಲವೆಂಬುದನ್ನೂ ಅದರಲ್ಲಿ ವ್ಯಕ್ತಪಡಿಸಲಾಗಿದೆ.

ಮೇಲೆ ತಿಳಿಸಿದ ಎರಡು ನಿರ್ಣಯಗಳನ್ನು ನಮ್ಮ ಪಕ್ಷದ ಪತ್ರಿಕೆಗಳಲ್ಲಿ ಈಗಾಗಲೇ ಪೂರ್ಣರೂಪದಲ್ಲಿ ಪ್ರಕಟಿಸಲಾಗಿದೆ. ಅದಕ್ಕೆ ಸಂಬಂಧಿಸಿದ ವರದಿಗಳು ಇತರ ಬಂಡವಾಳಶಾಹೀ ಪತ್ರಿಕೆಗಳಲ್ಲೂ ಬಂದಿವೆ. ಅಲ್ಲದೆ ಪಕ್ಷದ 13ನೇ ಅಧಿವೇಶನಕ್ಕಾಗಿ ಸಿದ್ಧಪಡಿಸಲಾಗಿರುವ ಕರಡು ರಾಜಕೀಯ ನಿರ್ಣಯದಲ್ಲಿ ಪ್ಯಾರಾ 1.16 ರಿಂದ 1.20ರ ವರೆಗೆ ಐದು ಪರಿಚ್ಛೇದಗಳಲ್ಲಿ ಸಂಪೂರ್ಣವಾಗಿ ಚೀನಾದಲ್ಲೂ ಮತ್ತು ಸೋವಿಯತ್ ಒಕ್ಕೂಟದಲ್ಲೂ ಆಗುತ್ತಿರುವ ಪುನರ್ರಚನೆ ಬಗ್ಗೆ ಪಕ್ಷದ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಇವುಗಳನ್ನೆಲ್ಲಾ ಗಮನವಿಟ್ಟು ಅಭ್ಯಾಸ ಮಾಡಿದ್ದರೆ ಪ್ರಶ್ನೆಕಾರ ಉದಹರಿಸಿದ ಟೀಕೆಯನ್ನು ವೇಣು ಅಂತಹವರು ಮಾಡುತ್ತಿರಲಿಲ್ಲ.

ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಬಂಡವಾಳಶಾಹೀ ಪುನರ್ರಚನೆಯ ಕ್ರಿಯೆಯೆಂದು ವೇಣು ಹೇಳುವ ಹಾಗೆ ಸೋವಿಯತ್ ಒಕ್ಕೂಟದಲ್ಲಾಗಲೀ, ಚೀನಾದಲ್ಲಾಗಲೀ ನಡೆದಿಲ್ಲ; ನಡೆಯುವುದೂ ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸಮಿತಿಯ ಕರಡು ರಾಜಕೀಯ ನಿರ್ಣಯದಲ್ಲಿ (ಪರಿಚ್ಛೇದ 1.20) ಸೂಚಿಸಿರುವಂತೆ ಹಿಂದಿನ ವಿಕೃತಿಗಳನ್ನು ನಿರ್ವಹಣೆಯಲ್ಲಿನ ಕಾರ್ಯಕ್ಷಮತೆಯಲ್ಲಿ ಹೆಚ್ಚಳದ ಅಭಾವವನ್ನು ನಿವಾರಿಸುವದು, ಉತ್ಪಾದನಾ ರಂಗದಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನ ಪುನರ್ರಚನೆಯ ಉದ್ದೇಶವಾಗಿದೆ. ಒಂದು ಸಮಾಜವಾದೀ ಸಮಾಜಕ್ಕೆ ಇಂತಹ ಸಮಸ್ಯೆಗಳನ್ನು ತಕ್ಷಣ ಪರಿಹರಿಸಿ ಆರ್ಥಿಕ ವ್ಯವಸ್ಥೆಯನ್ನು ಮತ್ತೆ ಪ್ರಗತಿ ಮಾರ್ಗದಲ್ಲಿ ತಂದಿರಿಸುವುದು ಅತ್ಯಂತ ಕಡಿಮೆ ಸಮಯದಲ್ಲೇ ಸಾಧ್ಯ ಎನ್ನುವುದೂ ಇದರಿಂದ ಮನವರಿಕೆಯಾಗುತ್ತದೆ. ಸಮಾಜವಾದೀ ಸಮಾಜದಲ್ಲಿ ಉತ್ಪಾದನಾ ಸಾಧನಗಳು ಸಮಾಜದ ಕೈಯಲ್ಲಿದ್ದು ಸಮಸ್ಯೆಗಳು ಕೆಲವು ಸ್ವೀಕೃತ ವಿಧಾನಗಳ ವಿಕೃತಿಯಿಂದಾಗಿಯಷ್ಟೇ ಉಂಟಾಗುತ್ತವೆಯಾದ್ದರಿಂದಲೇ ಇದು ಸಾಧ್ಯವಾಗುವುದು. ಸಮಾಜವಾದೀ ಸಮಾಜದಲ್ಲಿ ಶತ್ರುತ್ವಪೂರ್ಣ ವೈರುಧ್ಯಗಳು ಇರುವುದಿಲ್ಲವಾದ್ದರಿಂದ ಉತ್ಪಾದನಾ ಶಕ್ತಿಗಳ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸುವ ಉತ್ಪಾದನೆಯನ್ನು ಯೋಚಿಸುವುದು ಯಾವಾಗಲೂ ಸಾಧ್ಯ.

ಹಿಂದೆ ಅಂಗೀಕರಿಸಿದ ಕೇಂದ್ರ ಸಮಿತಿಯ ನಿರ್ಣಯದಂತೆ ಈ ಕರಡು ರಾಜಕೀಯ ವರದಿಯೂ ಒಮ್ಮತದಿಂದ ಅಂಗೀಕರಿಸಿದ್ದಾಗಿದೆ. ಆದ್ದರಿಂದ ಇ.ಎಂ.ಎಸ್. ಮತ್ತು ಬಿ.ಟಿ.ಆರ್. ನಡುವೆ ಭಿನ್ನಾಭಿಪ್ರಾಯವಿದೆ ಎಂಬ ಕಲ್ಪನೆ ನಿರಾಧಾರವಾದುದಾಗಿದೆ.

ಸಮಾಜವಾದೀ ಸಮಾಜದಲ್ಲಿ ಶೀಘ್ರಗತಿಯಲ್ಲಿ ಪ್ರಗತಿ ಸಾಧಿಸಲು ಅದರ ಆರ್ಥಿಕ ರಂಗವನ್ನು ಚುರುಕುಗೊಳಿಸಲು ಬೇಕಾದಂತಹ ಕ್ರಮಗಳನ್ನು ಸೋವಿಯತ್ ಒಕ್ಕೂಟ ಮತ್ತು ಚೀನಾಗಳೂ ಸೇರಿದಂತೆ ಎಲ್ಲಾ ಸಮಾಜವಾದಿ ದೇಶಗಳು ಇವತ್ತು ಅನುಸರಿಸುತ್ತಿವೆ. ಇದನ್ನೇ ಬಂಡವಾಳಶಾಹಿ ಪುನರ್ರಚನೆ ಎಂಬುದಾಗಿ ವೇಣು ಅವರಂತಹ ಕಮ್ಯುನಿಸ್ಟ್ ವಿರೋಧಿಗಳು ಹೇಳುತ್ತಿದ್ದಾರೆ. ಸಮಾಜವಾದವನ್ನು ಹೆಚ್ಚು ಕ್ರಿಯಾಶೀಲಗೊಳಿಸಲು ತೆಗೆದುಕೊಳ್ಳುವ ತೀರ್ಮಾನಗಳನ್ನು ಒಟ್ಟಾರೆಯಾಗಿ ಸ್ವಾಗತಿಸುವುದರ ಜೊತೆಗೆ ಸಿ.ಪಿ.ಐ.(ಎಂ) ಈ ತೀರ್ಮಾನಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಮಾರ್ಕ್ಸ್‌ವಾದಿ - ಲೆನಿನ್‌ವಾದಿ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳಿಗೂ ಮತ್ತು ಮಾರ್ಕ್ಸ್‌ವಾದದ ವಿರೋಧಿಗಳಿಗೂ ಇರುವ ವ್ಯತ್ಯಾಸ ಇದೇ ಆಗಿದೆ.

(ಅನು: ಇ.ಕೆ.ಎನ್.ರಾಜನ್-ಉದಯ)

4ನೇ ಪುಟದಿಂದ

ಮೂಲಕ ನಡೆಸಿದ ಆಘಾತದ ಅಗಾಧತೆಯ ಹಿಂದೆ ಅದನ್ನು ಶಾಸನವಾಗಿ ಮಾಡುವ ಮೊದಲಲ್ಲಿ ನಡೆಸಿದ ಮೋಸವೂ ಅಡಗಿಹೋಗಿದೆ. 1985 ಡಿಸೆಂಬರ್ 17ರಂದು ಪ್ರಧಾನಮಂತ್ರಿ ವಿರೋಧಪಕ್ಷಗಳ ಮುಖಂಡರನ್ನು ಭೇಟಿಮಾಡಿ ಈ ಬಗ್ಗೆ ಸಮಗ್ರ ಹಿನ್ನೆಲೆ ದಸ್ತಾವೇಜುಗಳನ್ನು ತಯಾರಿಸಿ ಮತ್ತೆ ಚರ್ಚೆ ನಡೆಸುವುದಾಗಿ ಮಾತುಕೊಟ್ಟರು. ನಂತರ ಡಿಸೆಂಬರ್ 21ರಂದು ಮುಸ್ಲಿಂ ಮುಖಂಡರೂಡನೆ ಕೆಲವು ಪ್ರಸ್ತಾಪಗಳನ್ನು ಚರ್ಚಿಸಿದರು. ಡಿಸೆಂಬರ್ 24ರಂದು ಭೇಟಿಯಾದ ಐದು ಮಹಿಳಾ ಸಂಘಟನೆಗಳು ಮತ್ತು ಕೆಲವು ಮುಸ್ಲಿಂ ಮಹಿಳೆಯರಿಗೆ ಎರಡು ಭರವಸೆ ನೀಡಿದರು. ಒಂದು ಮತ್ತೆ ಅವರನ್ನು ಭೇಟಿಯಾಗಿಯೇ ಅಂತಿಮ ನಿರ್ಣಯ ತಗೊಳ್ಳಲಾಗುವುದು. ಎರಡು-ಸಂಸತ್ತಿನಲ್ಲಿ ಈ ಬಗ್ಗೆ ಚರ್ಚೆಯಾಗುವಾಗ ತನ್ನ ಪಕ್ಷದ ಸದಸ್ಯರಿಗೆ ಯಾವುದೇ 'ವ್ಹಿಪ್' ಹೊರಡಿಸುವುದಿಲ್ಲ. ಈ ಎರಡೂ ಭರವಸೆಗಳು ಮತ್ತು ಸಮಗ್ರ ಹಿನ್ನೆಲೆ ದಾಸ್ತಾವೇಜು ತಯಾರಿಸುವ ಮಾತು ಎಲ್ಲವನ್ನೂ ನಂತರ ಪ್ರಧಾನಮಂತ್ರಿ ಗಾಳಿಗೆ ತೂರಿಬಿಟ್ಟರು.

ಅದೇ ಕುಚೋದ್ಯ

ಚುನಾವಣಾ ಸುಧಾರಣಾ ಮಸೂದೆಯ ಬಗ್ಗೆಯೂ ಇದೇ ಕುಚೋದ್ಯ. ಜನವರಿ 1985 ರಿಂದ ಇತ್ತೀಚಿನವರೆಗೂ ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆಯ ಭರವಸೆಗಳ ಮಹಾಪೂರ. ಆದರೆ ಜುಲೈ 20, 1988ರಂದು ಪ್ರಧಾನಮಂತ್ರಿ ಒಂದು ಹೇಳಿಕೆ ನೀಡಿ ಸಮಾಲೋಚನೆ ಈಗಾಗಲೇ ಮುಗಿದಿದೆ, ಮಸೂದೆ ಸಿದ್ಧವಾಗುತ್ತಿದೆ ಎಂದರು. ವಿರೋಧ ಪಕ್ಷಗಳ ಮುಖಂಡರು ಸಮಾಲೋಚನೆ ನಡೆಸಿಲ್ಲವೆಂದು ಹೇಳಿದಾಗ ಪ್ರಧಾನಮಂತ್ರಿಗಳು ವಿರೋಧ ಪಕ್ಷಗಳ ಅಭಿಪ್ರಾಯಗಳು ಈಗಾಗಲೇ ಚುನಾವಣಾ ಆಯೋಗದ ಮುಂದಿದೆಯಲ್ಲ-ಅದೇ ಸಾಕು. ಯಾರಾದರೂ ಈ ಬಗ್ಗೆ ಗಂಭೀರ ಚರ್ಚೆ ಬಯಸಿದರೆ ನಮ್ಮ ಅಧ್ಯಯನಕ್ಕೆ ಒಂದು ಸೂಕ್ತ ದಸ್ತಾವೇಜು ಕೊಡಲಿ ಎಂದು ಸಮಾ ಲೋಚನೆಯ ಒಂದು ಹೊಸ ಪರಿ ಕಲ್ಪನೆಯನ್ನೇ ಮುಂದಿಟ್ಟರು!

ಇದು ಮಾನನಷ್ಟ ಮಸೂದೆಯನ್ನು ಮಂಡಿಸುವ ಹತ್ತು ದಿನಗಳ ಮೊದಲು. ಹೀಗೆ ಶಾಸನವಾಗಲಿ, ಸೂಕ್ಷ್ಮ ವಿಷಯಗಳ ಬಗ್ಗೆ ಮಾತುಕತೆಯಾಗಲಿ ಇತರರನ್ನು ಬದಿಗೊತ್ತಿ ಕಸರತ್ತು ನಡೆಸುವ ಪ್ರಧಾನ ಮಂತ್ರಿಗಳ ಚಾಳಿ ಬಯಲಿಗೆ ಬಂದಿದೆ. ಆದರೆ ಇದಕ್ಕೆ ತಕ್ಕದಾದ ತಂತ್ರಗಳನ್ನು ರೂಪಿಸುವ ಶ್ರೀಮತಿ ಗಾಂಧಿಯವರ ನಿಪುಣತೆಯ ಅಭಾವದಿಂದಾಗಿ ಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಪರಿಣಾಮವನ್ನು ದೇಶ ಎದುರಿಸಬೇಕಾಗುತ್ತದೆ.

ಆದರೆ ಈ ಬಾರಿ ಜವಾಬ್ದಾರಿಯನ್ನೂ ಜವಾಬ್ದಾರರಾದವರ ಮೇಲೆಯೇ ಹೊರಿಸಬೇಕು. ಬೋಫೋರ್ಸ್, ಸಬ್‌ಮೆರಿನ್‌ಗಳಲ್ಲಿ ಇತರ ಮಂತ್ರಿಗಳು ಸಂಸತ್ತಿನಲ್ಲಿ ರಕ್ಷಿಸಿದ್ದರಿಂದಾಗಿ ರಾಜೀವಗಾಂಧಿ ತಪ್ಪಿಸಿಕೊಂಡರು. ಆದರೆ ತ್ರಿಪುರಾದ ವಿಷಯದಲ್ಲಿ ಅವರಿಗೆ ಈ ಅವಕಾಶ ನಿರಾಕರಿಸಬೇಕು. ಅಂಗೈ ಹುಣ್ಣಿಗೆ ಕನ್ನಡಿಯೇಕೆ ಎಂದು ಖಂಡಿತವಾಗಿಯೂ ಸಂಸತ್ ಸದಸ್ಯರು ಪ್ರಶ್ನಿಸಬಹುದು. ●



ಉಳಿಗಮಾನ್ಯ ವ್ಯವಸ್ಥೆಯ ಒಂದು ಗೋಡೆ ಚಿತ್ರ

ಕರಾವಳಿ ಪ್ರದೇಶದ ಅಳಿವೆಗಳಲ್ಲಿ ಹೂಳೆತ್ತಬೇಕು

ಮಂಗಳೂರು, ಗಂಗೊಳ್ಳಿ, ಭಟ್ಕಳ ಮುಂತಾದ ಅಳಿವೆಗಳಲ್ಲಿ ಹೂಳೆತ್ತದೆ ಕರಾವಳಿ ಪ್ರದೇಶದ ಒಂದು ಪ್ರಮುಖ ಕಸುಬಾದ ವಿಭಾಗದ ಮೀನುಗಾರರ ಪ್ರಾಣ ಹರಣವಾಗುತ್ತಿದೆ. ಮೀನುಗಾರರ ಅಭಿಪ್ರಾಯವನ್ನು ಮನ್ನಿಸಿ ಹೂಳೆತ್ತುವುದರ ಮೂಲಕ ಮೀನುಗಾರಿಕೆಯನ್ನು ಸುಗಮಗೊಳಿಸುವುದರ ಬದಲಿಗೆ ಅವರ ಜೀವಗಳ ಬಗ್ಗೆ ನಿರಂತರ ನಿರ್ಲಕ್ಷ್ಯ ತೋರುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೀತಿಯನ್ನು ಖಂಡಿಸಿ ರುವ 13ನೇ ಸಮ್ಮೇಳನ ಶೀಘ್ರವಾಗಿ ಎಲ್ಲಾ ಅಳಿವೆಗಳಲ್ಲೂ ಹೂಳೆತ್ತಬೇಕೆಂದೂ ಒತ್ತಾಯಿಸಿದೆ.

ಕಾಂಗ್ರೆಸ್(ಐ)ಎಂ.ಪಿ.ಶ್ರೀಮತಿ ಬಸವರಾಜೇಶ್ವರಿಯವರ ಕೃತ್ಯದ ತೀವ್ರ ಖಂಡನೆ ಮತ್ತು ರಾಜೀನಾಮೆಗೆ ಆಗ್ರಹ

ಶ್ರೀಮತಿ ಬಸವರಾಜೇಶ್ವರಿಯವರು ಬಳ್ಳಾರಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಇವರ ಸ್ವಂತ ಊರು ರಾಯಚೂರು ಜಿಲ್ಲೆಯ ಗೆಜ್ಜಲಗಟ್ಟೆ ಗ್ರಾಮ. ಗೆಜ್ಜಲಗಟ್ಟೆ ಹಾಗೂ ಅಸು ಪಾಸಿನ ಇತರ ಗ್ರಾಮಗಳಲ್ಲಿ ಒಟ್ಟು ಅಂದಾಜು 3,000 ಎಕರೆ ಜಮೀನನ್ನು ಹೊಂದಿರುತ್ತಾರೆ. ಕರ್ನಾಟಕಭೂ ಸುಧಾರಣೆ ಕಾನೂನಿನ ನ್ಯೂನತೆಗಳನ್ನು ಕುಟಿಲತೆ ಯಿಂದ ಉಪಯೋಗಿಸಿಕೊಂಡು ಪಾಳೇ ಗಾರಿ ದೌರ್ಜನ್ಯಗಳನ್ನೆಸಗುತ್ತಿದ್ದಾರೆ.

ಇವರ ಜೀತದಾಳುಗಳು ಕೂಲಿ ಕೇಳಿದಾಗ-ದೌರ್ಜನ್ಯಗಳನ್ನುಪ್ರತಿಭಟಿಸಿದಾಗ ದಲಿತಹೆಣ್ಣು ಮಕ್ಕಳನ್ನು ಅವಮಾನಿಸ ಲಾಯಿತು. ಅಲ್ಲದೆ, ದಲಿತ ಯುವಕ ಸೋರ್ವನ ಮೇಲೆ ತೀವ್ರ ಹಲ್ಲೆ ನಡೆಸಿರುತ್ತಾರೆ. ಊರಿನ ಆಂಜನೇಯ ಗುಡಿಗೆ ದಲಿತರನ್ನು ಬಹಿಷ್ಕರಿಸಿ ದಲಿತರು ಗುಡಿಯೊಳಗೆ ಪ್ರವೇಶಿಸಬಾರದೆಂದೂ ಬಹಿಷ್ಕರಿಸಿದ್ದಾರಲ್ಲದೆ ಆ ಗುಡಿ ಸಾರ್ವಜ ನಿಕರದಲ್ಲ ತಮ್ಮ ಸ್ವಂತದ್ದೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

ಈಗ 7 ತಿಂಗಳಿಂದ ಸುತ್ತಮುತ್ತಲಿನ ಭೂಮಾಲಿಕರನ್ನು ಸೇರಿಸಿ ರಾಜ್ಯ ರೈತ ಸಂಘ(ನಂಜುಂಡಸ್ವಾಮಿ ನೇತೃತ್ವದ) ರಚಿಸಿ ಆ ಮೂಲಕ ದಲಿತರಿಗೆ ಕೂಲಿ ಬಹಿಷ್ಕಾರ ಹಾಕಿಸಿದ್ದಾರೆ.

ಬಹಿಷ್ಕೃತ ದಲಿತರಿಗೆ ಕೂಲಿಯಿಲ್ಲದೆ ತೊಳಲುತ್ತಿದ್ದರೂ ಅಧಿಕಾರಿಗಳಾರೂ ಕಾಮಗಾರಿಗಳನ್ನು ಪ್ರಾರಂಭಿಸಿಲ್ಲ. 10-15 ಕಿ.ಮೀ ದೂರದ ಊರಿಗೆ ಹೋಗಿ ಕಬ್ಬಿಗೆ ಮಾರಿ ಕೂಲಿ ಮಾಡಿ ಜೀವಿಸ ಬೇಕಾದ ದುರ್ಭರ ಪರಿಸ್ಥಿತಿ ಅಲ್ಲಿನ ದಲಿತರದ್ದಾಗಿದೆ.

ಈ ದೌರ್ಜನ್ಯಗಳನ್ನು ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯದ 13ನೇ ಸಮ್ಮೇಳನ ತೀವ್ರವಾಗಿ ಖಂಡಿಸುತ್ತದೆ ಮತ್ತು ಲೋಕಸಭಾ ಸದಸ್ಯರಾಗಿ ಮುಂದು ವರಿಯುವ ಯಾವ ನೈತಿಕ ಹಕ್ಕು ಇಲ್ಲದ ಬಸವರಾಜೇಶ್ವರಿಯವರು ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸುತ್ತದೆ ಹಾಗೂ ಕರ್ನಾಟಕ ಸರ್ಕಾರ ಕೂಡಲೇ ಅಲ್ಲಿನ ದಲಿತರಿಗೆ ಸರ್ವ ರೀತಿಯ ರಕ್ಷಣೆಯನ್ನು ಒದಗಿಸ ಬೇಕೆಂದು ಒತ್ತಾಯಿಸುತ್ತದೆ.

ಕೈಗಾರಿಕಾ ಅಸ್ವಸ್ಥತೆಗೆ ತರುವ ನೀತಿ ವಿರುದ್ಧ ಹೋರಾಟ

ರೋಗಗ್ರಸ್ತವಾಗುವ ಕೈಗಾರಿಕೆಗಳ ಸಂಖ್ಯೆ ಹೆಚ್ಚುತ್ತಲೇ ಇದ್ದರೂ, ಸರ್ಕಾರ ಯಾವ ಗಮನವನ್ನು ಹರಿಸಿಲ್ಲ. ರಾಜ್ಯದ ಜನತಾ ಸರ್ಕಾರದ ಧೋರಣೆಯೂ ಬೇರೆಯೇನಿಲ್ಲ. ರಾಜ್ಯದಲ್ಲಿ 6000 ಕ್ಕಿಂತ ಹೆಚ್ಚು ರೋಗಗ್ರಸ್ತ ಘಟಕಗಳಿದ್ದರೂ ಉದಾಸೀನತೆ ಪ್ರದರ್ಶಿಸುತ್ತಾ ಕೇಂದ್ರದ ನೀತಿಯನ್ನೇ ಅನುಸರಿಸಿ, ರಾಜ್ಯ ಸರ್ಕಾರವೂ ರಾಜ್ಯದ ಸರ್ಕಾರೀ ಉದ್ಯಮಗಳ ಖಾಸಗೀಕರಣಕ್ಕೆ ಇಂಬು ಕೊಡುತ್ತಿದೆ.

ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕು

1947ರಿಂದ ಈವರೆವಿಗೆ ಅನುಸರಿಸಿ ಕೊಂಡು ಬಂದ ಬಂಡವಾಳಶಾಹಿ ಪಥದಿಂದಾಗಿ ಬೆಳೆಯುತ್ತಾ ಬಂದಿರುವ ನಿರುದ್ಯೋಗ ರಾಜೀವಗಾಂಧಿ ಸರ್ಕಾರ ಅನುಸರಿಸುತ್ತಿರುವ ನೀತಿಗಳಿಂದಾಗಿ ಮತ್ತಷ್ಟು ತೀವ್ರಗೊಂಡಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅನೇಕ ಹುದ್ದೆಗಳನ್ನು ಖಾಲಿಬಿಟ್ಟಿದ್ದು, ಹೊಸಬರನ್ನು ಕೆಲಸಕ್ಕೆ ತೆಗೆದುಕೊಳುವುದರ ಮೇಲೆ ಹೇರಿರುವ ನಿಷೇಧದಿಂದ ಸಮಸ್ಯೆ ಇನ್ನೂ ಗಂಭೀರಗೊಂಡಿದೆ.

ನಿರುದ್ಯೋಗ ಸಮಸ್ಯೆಗೆ ಕಾರಣಗಳನ್ನು ಮತ್ತು ಪರಿಹಾರವನ್ನು ನಿರುದ್ಯೋಗಿಗಳ ಹಾಗೂ ಜನತೆಯ ನಡುವೆ ವ್ಯಾಪಕವಾಗಿ ಪ್ರಚಾರ ಮಾಡಿ, ನಿರುದ್ಯೋಗವನ್ನು ಹೆಚ್ಚಿ ಸುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಸಂಘಟಿತ ಚಳುವಳಿಯನ್ನು ನಡೆಸ ಬೇಕೆಂದೂ, ಇದಕ್ಕಾಗಿ ಪಕ್ಷದ ಸದಸ್ಯರು, ತಮ್ಮ ಸುತ್ತಮುತ್ತಲಿರುವ ನಿರುದ್ಯೋಗಿ ಗಳನ್ನು ಸಂಪರ್ಕಿಸಿ ಅವರ ಪಟ್ಟಿಗಳನ್ನು ತಯಾರಿಸಿ ಪ್ರಯತ್ನವನ್ನು ಪ್ರಾರಂಭಿಸ ಬೇಕೆಂದೂ ಕರ್ನಾಟಕ ರಾಜ್ಯ ಸಮ್ಮೇಳನವು ರಾಜ್ಯದಲ್ಲಿರುವ ಪಕ್ಷದ ಎಲ್ಲಾ ಸಮಿತಿ ಗಳಿಗೇ, ಶಾಖೆಗಳಿಗೆ ಮತ್ತು ಸದಸ್ಯರಿಗೆ ಕರೆ ನೀಡಿದೆ.

ಕೆಲಸದ ಹಕ್ಕು ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಬೇಕು ಮತ್ತು ಉದ್ಯೋಗವು ಸಿಕ್ಕುವವರೆವಿಗೂ ನಿರುದ್ಯೋಗ ಭತ್ಯೆ ಯನ್ನು ಕೊಡಬೇಕು ಎಂಬ ಬೇಡಿಕೆ ಗಳನ್ನು ಕರ್ನಾಟಕದ ಇಂದಿನ ಮುಖ್ಯ ಮಂತ್ರಿ ಎಸ್.ಆರ್.ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಹೆಗಡೆ ಸೇರಿದಂತೆ ಜನತಾದಳದ ಮುಖಂಡರು ಸ್ವೀಕರಿ ಸುವುದನ್ನು ಈ ಸಮ್ಮೇಳನವು ಗಮನಿಸಿ ಈ ಬೇಡಿಕೆಗಳಿಗಾಗಿ ಐಕ್ಯ ಚಳುವಳಿ ಯನ್ನು ನಡೆಸಲು ಮುಂದಾಗ ಬೇಕೆಂದು ಈ ಬೇಡಿಕೆಗಳನ್ನು ಒಪ್ಪುವ ಪಕ್ಷಗಳಿಗೆ ಈ ಸಮ್ಮೇಳನವು ಮನವಿ ಮಾಡಿದೆ.

ಪರಿಣಾಮಕಾರಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಗತ್ಯ

ಜನಸಾಮಾನ್ಯರ ಜೀವನವನ್ನು ಅತ್ಯಂತ ಕಷ್ಟಕರವನ್ನಾಗಿ ಮಾಡುವ ಅಗತ್ಯ ವಸ್ತುಗಳ ವಿಪರೀತ ಬೆಲೆ ಏರಿಕೆಗೆ ಕೇಂದ್ರ ಸರ್ಕಾರವೇ ಪೂರ್ಣ ಜವಾಬ್ದಾರಿ ಹೆಚ್ಚುತ್ತಿ ರುವ ಅಪ್ರತ್ಯಕ್ಷ ತೆರಿಗೆ, ಸರ್ಕಾರಿ ನಿಗದಿತ ಬೆಲೆಯಲ್ಲಿ ಏರಿಸು ವುದು ಇತ್ಯಾದಿಗಳ ವಿರುದ್ಧ ಪ್ರಚಾರ ಮಾಡಬೇಕೆಂದು ಜನರಿಗೆ ಕರೆ ನೀಡಿರುವ 13ನೇ ಸಮ್ಮೇಳನ ಇದರಿಂದ ಮಾತ್ರ ಬೆಲೆ ಏರಿಕೆಯನ್ನು ತಡೆಗಟ್ಟಲು ಸಾಧ್ಯವಿದೆ. ಜೊತೆಯಲ್ಲಿ, ಬೆಲೆಯನ್ನು ಕಡಿಮೆಮಾಡಲುಪರಿಣಾಮ ಕಾರಿಯಾದ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಗತ್ಯ ವೆಂಬುದನ್ನು ಮನವರಿಕೆ ಮಾಡಿಕೊಡ ಬೇಕಾಗಿದೆ ಎಂದು ಹೇಳಿದೆ.

ಈಗ ಇರುವ ವಿತರಣಾ ವ್ಯವಸ್ಥೆಯು ಸಹ ಕೇಂದ್ರ ಸರ್ಕಾರದ ರೇಷನ್ ಕಡಿತ ದಿಂದ ತೊಂದರೆಗೊಳಗಾಗಿದೆ ಎನ್ನುವು ದನ್ನು ಗಮನಿಸಿರುವ ಸಮ್ಮೇಳನವು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಯಾವುದೇ ತಾರತಮ್ಯವಿಲ್ಲದೆ ಹಳ್ಳಿ ಪ್ರದೇಶಗಳಿಗೂ ವಿಸ್ತರಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಪೂರ್ಣ ಪ್ರಮಾಣದ ರೇಷನ್ ಈ ಕೂಡಲೇ ಬಿಡುಗಡೆಗೊಳಿಸಬೇಕೆಂದು ಸಮ್ಮೇಳನ ಕೇಳಿಕೊಂಡಿದೆ.

ಕೈಗಾರಿಕಾ ಅಸ್ವಸ್ಥತೆಗೆ ಕಾರಣವಾಗುವ ಸರ್ಕಾರದ ನೀತಿಯ ವಿರುದ್ಧ ಅವಿರತ ಹೋರಾಟ ನಡೆಸಬೇಕೆಂದೂ, ಅಸ್ವಸ್ಥತೆಗೆ ಕಾರಣವಾಗಿರುವ ಸರ್ಕಾರದ ನೀತಿಯನ್ನು ಬಹಿರಂಗಗೊಳಿಸಬೇಕೆಂದೂ, ತ್ವರಿತಗತಿಯ ಕೈಗಾರಿಕಾ ಅಭಿವೃದ್ಧಿ ಮತ್ತು ಎಲ್ಲಾ ಜನರಿಗೂ ಉದ್ಯೋಗ ಸಿಗುವ ಪರ್ಯಾಯ ವ್ಯವಸ್ಥೆಗೆ ಹೋರಾಡ ಬೇಕೆಂದೂ ರಾಜ್ಯದ ಜನತೆಗೆ 13ನೇ ರಾಜ್ಯ ಸಮ್ಮೇಳನ ಕರೆ ನೀಡಿದೆ.

ಎರಡನೇ ಚಾನೆಲ್ ರಾಜ್ಯ ಸರ್ಕಾರಗಳಿಗೆ ವಹಿಸಬೇಕು:

ಭಾರತ ಸರ್ಕಾರದ ದೂರದರ್ಶನ ಮತ್ತು ಆಕಾಶವಾಣಿ ಕೇಂದ್ರಗಳು ಆಳುವ ಕಾಂಗ್ರೆಸ್(ಐ) ಪಕ್ಷದ ಖಾಸಗಿ ಪ್ರಸಾರ ಮಾಧ್ಯಮಗಳ ರೀತಿಯಲ್ಲಿ ದುರುಪ ಯೋಗವಾಗುತ್ತಿರುವುದನ್ನು 13ನೇ ರಾಜ್ಯ ಸಮ್ಮೇಳನವು ತೀವ್ರವಾಗಿ ಖಂಡಿಸಿದೆ. ಇವೆರಡೂ ಪ್ರಸಾರ ಮಾಧ್ಯಮಗಳಿಗೆ ಕೇಂದ್ರ ಸರ್ಕಾರದ ಸಾಮಾನ್ಯ ನಿಯಂತ್ರಣ ದಡಿಯಲ್ಲಿ, ಅಗತ್ಯ ಸ್ವಾಯತ್ತತೆ ನೀಡ ಬೇಕೆಂದು ಸಮ್ಮೇಳನವು ಒತ್ತಾಯಿಸಿದೆ.

ವಿವಿಧ ಭಾಷಾ ಜನಾಂಗಗಳ ಸಾಂಸ್ಕೃತಿಕ ಸಾಮಾಜಿಕ ಹಾಗೂ ವಿಭಿನ್ನ ರಾಜಕೀಯ ನಿಲುವುಗಳ ಅಭಿವ್ಯಕ್ತಿಗೆ ಸಹಾಯಕವಾಗುವಂತೆ ಟಿ.ವಿ. ಎರಡನೇ ಚಾನೆಲನ್ನು ರಾಜ್ಯ ಸರ್ಕಾರಗಳಿಗೆ ವಹಿಸಿ ಕೊಡಬೇಕೆಂದು ಸಮ್ಮೇಳನವು ಒತ್ತಾಯಿ ಸಿದೆ.

ಈ ನಿಟ್ಟಿನಲ್ಲಿ ಸರ್ಕಾರಿ ಮಾಧ್ಯಮಗಳ ಮೇಲೆ ಆಳುವ ಪಕ್ಷದ ಗುತ್ತಿಗೆಯನ್ನು ಮುರಿಯಲು ಹೋರಾಡಬೇಕೆಂದು ರಾಜ್ಯದ ಜನತೆಗೆ ಕರೆ ನೀಡಿದೆ.

ಸಾಮ್ರಾಜ್ಯ ಶಾಹಿಗಳ ಏಜೆಂಟರಾಗಿ ದುಡಿಯುತ್ತಿರುವ ಸ್ವಯಂಸೇವೀ ಸಂಘಟನೆಗಳು

ಜನತೆಯ ಅತೃಪ್ತಿಯನ್ನು ತಪ್ಪು ದಾರಿಗೆಳೆಯಲು ಒಂದು ಕಡೆ ಕೋಮು ವಾದಿಗಳು, ಮತಾಂಧ, ಭಾಷಾಂಧ ಶಕ್ತಿಗಳು ಪ್ರಯತ್ನಿಸುತ್ತಿದ್ದರೆ ಇನ್ನೊಂದೆಡೆ ಎಡಸೋಗು ಹಾಕಿಕೊಂಡು ಹಲವಾರು ಸ್ವಯಂಸೇವೀ ಸಂಘಟನೆಗಳು ಮಾಡು ತ್ತಿವೆ. ಅಮೇರಿಕನ್ ಸಾಮ್ರಾಜ್ಯಶಾಹೀ ಏಜೆಂಟರು ಈ ಸಂಸ್ಥೆಗಳ ಮೂಲಕ ಗ್ರಾಮೀಣ ಹಾಗೂ ಗುಡ್ಡಗಾಡು ಜನತೆಯ ಅಭಿವೃದ್ಧಿ ಕಾರ್ಯಕ್ರಮದ ಸೋಗನ್ನು ಹಾಕಿಕೊಂಡು ಎಡಚಳುವಳಿ, ಮುಖ್ಯವಾಗಿ ಸಿ.ಪಿ.ಐ(ಎಂ) ಬಲಿಷ್ಠವಾಗಿ ರುವಲ್ಲಿ ತಮ್ಮ ಕಾರ್ಯಕ್ಷೇತ್ರ ಆರಂಭಿ ಸುತ್ತಾರೆ. ದೇಶಾದ್ಯಂತ ಕಾಣಬಹುದಾದ ಇಂತಹ ಸಂಘಟನೆಗಳು ಮುಖ್ಯವಾಗಿ ಯುವಜನರ, ವಿದ್ಯಾರ್ಥಿಗಳ, ಮಹಿಳೆ ಯರ, ಹಿಂದುಳಿದಜನರ, ಕೃಷಿಕೂಲಿಗಾರರ ನಡುವೆ ನುಸುಳಿ ಅವರ ಸಂಸ್ಕೃತಿ, ಕಲೆಗಳ ಅಧ್ಯಯನದ ಹೆಸರಿನಲ್ಲಿ ಜನರನ್ನು ಧಿಕ್ಕೆಡಿಸುತ್ತಿರುವುದನ್ನು, ಪ್ರತ್ಯೇಕತಾ ಭಾವನೆಯನ್ನು ಕೆರಳಿಸು ವುದನ್ನು ಕರ್ನಾಟಕದಲ್ಲೂ ಕಾಣಬಹು ದಾಗಿದೆ.

ಮುಖ್ಯವಾಗಿ ಪ್ರದರ್ಶನ ಕಲೆಗಳು, ಜಾನಪದ ಕಲೆ, ರಂಗಭೂಮಿ, ಪರಿಸರ ರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ಈ ಸಾಮ್ರಾಜ್ಯಶಾಹೀ ಏಜೆಂಟರು ದುಡಿಯು ತ್ತಿದ್ದಾರೆ. ಈ ಶಕ್ತಿಗಳೊಂದಿಗೆ ಶಾಮೀಲಾಗಿ ಕೆಲಸಮಾಡುತ್ತಿರುವ ಸಂಘ-ಸಂಸ್ಥೆಗಳನ್ನು, ಸಾಮ್ರಾಜ್ಯಶಾಹೀ ಪಿತೂರಿಯನ್ನು ಖಂಡಿಸಿ ರುವ ಸಮ್ಮೇಳನ ಇಂತಹ ಸಂಘಟನೆಗಳ ಕುತಂತ್ರಗಳನ್ನು ಬಗೆದು ಅವುಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕೆಂದು, ಅವುಗಳ ದುರುದ್ದೇಶಗಳನ್ನು ಬಯಲಿ ಗೆಳೆಯಲು ವಿಶಾಲ ತಳಹದಿಯ ಪ್ರಬಲ ಕಾರ್ಯಕ್ರಮ ಹಮ್ಮಿಕೊಳ್ಳಲು ದುಡಿಯುವ ಜನತೆಗೆ ಸಮ್ಮೇಳನ ಕರೆ ನೀಡಿದೆ.

ಬರಗಾಲಕ್ಕೆ ಶಾಶ್ವತ ಪರಿಹಾರ ಅಗತ್ಯ

ಕರ್ನಾಟಕ 4 ವರ್ಷಗಳ ಒಣ ಬರದ ನಂತರ ಹಸಿ ಬರ (ಅತಿವೃಷ್ಟಿಯಿಂದ ಆದ ಬರಗಾಲ)ದಿಂದ ರಾಜ್ಯದ ಹೆಚ್ಚಿನ ಭಾಗ ಪೀಡಿತವಾಗಿದೆ.

ಕೇಂದ್ರ ಸರ್ಕಾರ ಬರಗಾಲ ಅಧ್ಯಯನ ತಂಡವನ್ನು ಕಳುಹಿಸಿ ರಾಜ್ಯದಲ್ಲಿ ಪ್ರವಾಸ ಮಾಡಿ ಅಧ್ಯಯನ ಮಾಡಿ ಹೋಗಿದೆ. ರಾಜ್ಯಾದ್ಯಂತ ಸುಮಾರು 300 ಕೋಟಿ ನಷ್ಟವಾಗಿದೆ, ರಾಜ್ಯ ಸರ್ಕಾರ ವರದಿ ಸಲ್ಲಿಸಿದೆ. ಆದರೆ ಇಲ್ಲಿಯವರೆಗೆ ಯಾವುದೇ ಹಣ ಕೇಂದ್ರ ಸರ್ಕಾರ ನೀಡಿಲ್ಲ. ಪ್ರಕೃತಿ ವಿಕೋಪಗಳು ಅತಿವೃಷ್ಟಿ-ಅನಾವೃಷ್ಟಿ ಉಂಟಾದಾಗ ಅಲ್ಪಸ್ವಲ್ಪ ಪರಿಹಾರ ಒದಗಿಸುವುದು ಬಿಟ್ಟರೆ ಯೋಜನೆಯಲ್ಲಿ ಹಣ ಒದಗಿಸದಿರುವುದು ಜನವಿರೋಧಿ ನೀತಿಯಾಗಿದೆ.

ಬರಗಾಲ ಜನಸಾಮಾನ್ಯರಿಗೆ ಕಷ್ಟದ ಕಾಲವಾದರೆ ಬಂಡವಾಳಶಾಹಿ, ಭೂ ಮಾಲಿಕ, ಬಡ್ಡಿ ಹಣದವರಿಗೆ ಸುಗ್ಗಿಯ ಕಾಲವಾಗಿರುತ್ತದೆ.

ಕರ್ನಾಟಕದಲ್ಲಿ ಕಾರ್ಮಿಕ ವರ್ಗ ಬರಗಾಲದಲ್ಲಿ ರೈತರ ಬೆಂಬಲಕ್ಕೆ ಬಂದಿದೆ ಎಂಬುದನ್ನು ಸ್ಮರಿಸುವುದು ಅಗತ್ಯ.

ರಾಜ್ಯ ಸರ್ಕಾರವು ಇದ್ದ ಸಂಪನ್ಮೂಲಗಳಲ್ಲಿಯೇ ತುರ್ತು ಪರಿಹಾರಕ್ಕೆ ಮುಂದಾಗಿ, ಆದ ನಷ್ಟಕ್ಕೆ ಪರಿಹಾರ ಕೊಡುವುದು, ರೈತ ಕೃಷಿ ಕೂಲಿಕಾರರಿಗೆ ಕೆಲಸ ಕೊಡುವುದು, ದನಕರುಗಳಿಗೆ ಮೇವು ಒದಗಿಸುವುದು ಇತ್ಯಾದಿ. ಕ್ರಮ ಕೈಗೊಳ್ಳಬೇಕು. ಕೃಷಿ ಸಾಲ ರದ್ದುಪಡಿಸಿ, ಭೂ ಕಂದಾಯ ಮನ್ನಾ ಮಾಡುವುದು.

ಕೇಂದ್ರ ಸರ್ಕಾರವು ತುರ್ತಾಗಿ ಬರಗಾಲ ಪರಿಹಾರಕ್ಕೆ, ಆದ ನಷ್ಟಕ್ಕೆ ಪರಿಹಾರಕ್ಕೆ, ಹಣ ಒದಗಿಸಬೇಕು. ಜೊತೆಗೆ ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಯೋಜನೆ ಗಳಲ್ಲಿ ಹಣ ಒದಗಿಸಿ ಶಾಶ್ವತ ಪರಿಹಾರ ಕೈಗೊಳ್ಳಬೇಕೆಂದು ಸಮ್ಮೇಳನವು ನಿರ್ಣಯ ಅಂಗೀಕರಿಸಿದೆ.

ಭೂಮಿಕೊಡಿ! ನೀರುಕೊಡಿ!



ಭೂಮಿಕೊಡಿ, ನಮಗೆಭೂಮಿಕೊಡಿ
ಕಳೆಯಕಿತ್ತು ಬದುಕಿನ ಬೆಳೆ ಬೆಳೆಯುತೀವಿ!
ನೀರುಕೊಡಿ ನಮಗೆ ನೀರು ಕೊಡಿ,
ತೆನೆಗಳನ್ನು ಮುದ್ದಾಡುವ ದಿನಗಳನ್ನು
ಭೂಮಿ ಕೊಡಿ ನಮಗೆ ನೀರು ಕೊಡಿ.

ರಸ್ತೆಗಳು ಕೂಗುತಾವೆ,
ಮೌನ ಹೊದ್ದ ಗೋಡೆಗಳು
ಘೋಷಣೆಗಳ ಹಾಡುತಾವೆ
ಬಂಜೆತನದ ನೆಲಕೆ ನಾವು
ತಾಯ್ತನವನು ಕೊಡುತೇವೆ!
ಭೂಮಿಕೊಡಿ ನಮಗೆ ನೀರು ಕೊಡಿ.

ಲಾಟಿ ಬೂಟು ಗುಮ್ಮಗಳೆ
ಕನಸುಗಳ ಕಸಿಯದಿರಿ,
ಕೊಳೆತ ಕರಿಣ ಮುಳ್ಳುಗಳೆ
ದಿಕ್ಕಾರದ-ಜಯಕಾರದ
ಕೈಗಳ ಬಂಧಿಸದಿರಿ.

ದೀರ್ಘಹಾದಿಗಳನು ತಡವಿ
ಶತಮಾನ ರಕ್ತಸೋಸಿ
ಗುಡ್ಡದಂತೆ ಸೇರುತೀವಿ
ನದಿಯಂತೆ ಹರಿಯುತೀವಿ
ಮಹಾಸಾಗರದಿ ನಿಂತು
ಹೆಡೆ ಬಿಚ್ಚಿ ಕುಕ್ಕುತೇವಿ.

ಬಂಡೆಯಂಥ ನಿಮ್ಮ ಎದೆಯ
ಸೀಳುವಂತೆ ಕೇಳುತೀವಿ
ಭೂಮಿಕೊಡಿ ನಮಗೆ ನೀರುಕೊಡಿ!

ನಮ್ಮ ಭೂಮಿ ನಮಗೆಕೊಡಿ
ನಮ್ಮ ಬದುಕ ನಮಗೆಬಿಡಿ
ನಮ್ಮ ಹಸಿರ ಉಸಿರ ಕೊಡಿ
ನಮ್ಮ ನಗೆ ನಮಗೆ ಬಿಡಿ
ತುಂಡು ತುಂಡು ಇಲ್ಲನೋಡಿ
ನಾವೆಲ್ಲಾ ಒಂದೇ ನೋಡಿ
ಭೂಮಿಕೊಡಿ ನಮಗೆ ನೀರುಕೊಡಿ.

ಪಿ.ಆರ್.ವೆಂಕಟೇಶ್

ಪಶ್ಚಿಮ ಬಂಗಾಳ 16ನೇ ರಾಜ್ಯ ಸಮ್ಮೇಳನ ವರ್ಗಬಲಾಬಲಗಳಲ್ಲಿ ತೀವ್ರ ಬದಲಾವಣೆ ಕರ

ಡಿಸೆಂಬರ್7 ರಂದು ಕಲ್ಕತ್ತಾದ ಬೃಹತ್ ಬ್ರಿಗೇಡ್ ಮೈದಾನ ಕೂಡಾ ತುಂಬಿ ತುಳುಕುತ್ತಿತ್ತು. ಡಿಸೆಂಬರ್ 3 ರಂದ 4 ದಿನ ನಡೆದ ಸಿ.ಪಿ.ಐ.(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಘಟಕದ 16ನೇ ಸಮ್ಮೇಳನದ ನಿರ್ಣಯಗಳನ್ನು ಕಲಾಪಗಳ ವಿವರ ಕೇಳಲು 12 ಲಕ್ಷ ಮಂದಿ ನೆರೆದಿದ್ದರು. ಅವರು ನಗರದ, ರಾಜ್ಯದ ಮೂಲೆ ಮೂಲೆಗಳಿಂದ ವರ್ಣರಂಜಿತ ಮೆರವಣಿಗೆಗಳಲ್ಲಿ ಬಂದಿದ್ದರು. ಜನತೆಯನ್ನು ದ್ದೇಶಿಸಿ ಮಾತನಾಡಿದ ಕಾಂ.ಬಿ.ಟಿ.ಆರ್. ಕೇಂದ್ರದ ಕಾಂಗ್ರೆಸ್(ಐ)ನ ನಾಲ್ಕು ಮಹಾಪರಾಧಗಳನ್ನು ಮತ್ತು ಅದರ ಕಾರಣ, ಪರಿಣಾಮಗಳನ್ನು ವಿವರಿಸಿದರು. 1977 ರಂತೆ ಈಗ ಇನ್ನೊಂದು ಚಾರಿತ್ರಿಕ ಗಳಿಗೆ ಬಂದಿದೆಯೆಂದರು ಕಾಂ. ಜ್ಯೋತಿ ಬಸು. ಆದರೆ ನಮ್ಮ ಮೂಲಭೂತ ಕರ್ತವ್ಯ ಸಮಸ್ತ ರಾಜಕೀಯ ರಚನೆಯನ್ನೇ ಬದಲಿಸುವುದು. ಇದಕ್ಕೆ ಪಕ್ಷ ಇನ್ನು ಮುಂದೆಯೂ ದುಡಿಯುತ್ತದೆ ಎಂದರು.

ಡಿಸೆಂಬರ್ 3 ರಂದು ಕಾಂ.ಇ.ಎಂ.ಎಸ್. ಕೆಂಬಾವುಟದ ಆರೋಹಣ ನಡೆಸುವ ಮೂಲಕ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿದರು. ಧ್ವಜವಂದನೆ ಮಾಡುತ್ತಾ ಕೆಂಪು-ಬಿಳಿ ಸಮವಸ್ತ್ರ ಧರಿಸಿದ ಸ್ವಯಂಸೇವಕರ ಅನಂತವೋ ಎಂಬಂತೆ ಎರಡು ಗಂಟೆಗಳ ಕಾಲ ಸಾಗಿದ ಸಾಲು-ಸಾಲು ಅವಿಸ್ಮರಣೀಯ.

ಹಲವು ತಿಂಗಳ ಕಾಲ ವ್ಯವಸ್ಥಿತ ಸಿದ್ಧತೆಯ ಸಡಗರದ ವಾತಾವರಣ ಮೂಡಿಸಿದ್ದ ಈ 16ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯದಲ್ಲಿ ಪಕ್ಷದ 155243 ಸದಸ್ಯರನ್ನು ಪ್ರತಿನಿಧಿಸಿದ 623 ಪ್ರತಿನಿಧಿಗಳು ಮತ್ತು 99 ವೀಕ್ಷಕರು ಭಾಗವಹಿಸಿದ್ದರು. 15 ನೇ ಸಮ್ಮೇಳನದ ಹೊತ್ತಿಗೆ ಸದಸ್ಯತ್ವ ಸಂಖ್ಯೆ 136980 ಇತ್ತು. ಪಕ್ಷದ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಸಂಖ್ಯೆಯೂ ಈ ಮೂರು ವರ್ಷದಲ್ಲಿ 88.32 ಲಕ್ಷದಿಂದ 1.33 ಕೋಟಿಗೇರಿದೆ.

ರಾಜ್ಯ ಕಾರ್ಯದರ್ಶಿ ಹಾಗೂ ಪಾಲಿಟ್‌ಬ್ಯೂರೋ ಸದಸ್ಯ ಕಾಂ.ಸರೋಜ್‌ಮುಖರ್ಜಿ ಮಂಡಿಸಿದ ವರದಿಯ ಮೇಲಿನ ಚರ್ಚೆಯಲ್ಲಿ 62 ಪ್ರತಿನಿಧಿಗಳು ಭಾಗವಹಿಸಿ ಅದನ್ನು ಇನ್ನಷ್ಟು ಶ್ರೀಮಂತ ಗೊಳಿಸಿದರು.

ಅಂತರಾಷ್ಟ್ರೀಯ, ರಾಷ್ಟ್ರೀಯ ಸನ್ನಿವೇಶದ ಹಿನ್ನೆಲೆಯಲ್ಲಿ ರಾಜ್ಯದ ಸನ್ನಿವೇಶವನ್ನು ವಿಶ್ಲೇಷಿಸಿದ ವರದಿ ಸುಸ್ತಾಗಿರುವ ರಾಜೀವ ಸರ್ಕಾರ ಎಡರಂಗ ಸರ್ಕಾರದ ಸರ್ವ ರೀತಿಯ ಆಕ್ರಮಣ ಹರಿಯ ಬಿಡುವುದು, ಆದ್ದರಿಂದ ರೈತರ, ಕಾರ್ಮಿಕರ, ಇತರ ಜನ ವಿಭಾಗಗಳ ವ್ಯಾಪಕ ಹಾಗೂ ತೀವ್ರ ಹೋರಾಟಗಳನ್ನು ಕಟ್ಟಲು ನಮ್ಮೆಲ್ಲ ಶ್ರಮವನ್ನು ಕೇಂದ್ರೀಕರಿಸಬೇಕೆಂದು ಕರೆ ನೀಡಿದರು.

ಎಡರಂಗ ಸರ್ಕಾರ /ದೇಶದ್ದ ಪ್ರಜಾಪ್ರಭುತ್ವದ ಅಗ್ರಕಾವಲು ಠಾಣೆಯಾಗಿ ಮೂಡಿಬಂದುದನ್ನು ವಿವರಿಸಿದ ವರದಿ ಅದೇ ವೇಳೆಗೆ ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಕಂಡುಬಂದ ನ್ಯೂನತೆಗಳು ಮತ್ತು ದೌರ್ಬಲ್ಯಗಳ ಬಗ್ಗೆ ಸತತ ಎಚ್ಚರದಿಂದಿರ ಬೇಕೆಂದು, ವರ್ಗಶಕ್ತಿಗಳ ಸಮತೋಲದಲ್ಲಿ ಒಂದು ತೀವ್ರಗಾಮಿ ಬದಲಾವಣೆ ತರುವ ಮೂಲಭೂತ ರಾಜಕೀಯ ಕರ್ತವ್ಯ ನೆರವೇರಿಸಲು ಅವಿಶ್ರಾಂತ ಪ್ರಯತ್ನಿಸಬೇಕೆಂದು ಹೇಳಿತು.

ಕಾಂ.ಬಿ.ಟಿ.ಆರ್. ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಜ್ಯೋತಿ ಬಸು ರವರೂ ಮಾತ ನಾಡಿದ ಮೇಲೆ 93 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯನ್ನು ಆರಿಸಲಾಯಿತು. ಸರೋಜ್ ಮುಖರ್ಜಿ ಕಾರ್ಯದರ್ಶಿಯಾಗಿ ಪುನರಾಯ್ಕೆ ಗೊಂಡರು. ಶೈಲೇನ್ ದಾಸಗುಪ್ತಾ ಕೋಶಾಧಿಕಾರಿ ಯಾಗಿ ಮತ್ತು ಅನಿಲ್ ಬಿಸ್ವಾಸ್ ಪಕ್ಷದ ಪತ್ರಿಕೆಯ ಸಂಪಾದಕರಾಗಿ ಆಯ್ಕೆಯಾದರು.

ತ್ರಿಪುರಾಃ ತುರ್ತು ಬೇಡಿಕೆಗಳ ಮೇಲೆ ಆಂದೋಲನ

ಅಕ್ಟೋಬರ್ 27ರಿಂದ 30 ರವರೆಗೆ ಅಗರ್ತಲಾದಲ್ಲಿ 13ನೇ ತ್ರಿಪುರಾ ರಾಜ್ಯಸಮ್ಮೇಳನ ನಡೆಯಿತು. ಕೇಂದ್ರದಿಂದ ಇ.ಎಂ.ಎಸ್. ಹಾಗೂ ಎಂ.ಬಸವ ಪುನ್ನಯ್ಯ ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ರಾಜ್ಯದ ಎಲ್ಲಾ ಭಾಗಗಳಿಂದ ಬಂದ 296 ಪ್ರತಿನಿಧಿಗಳು ಭಾಗವಹಿಸಿದರು. ರಾಜ್ಯ ಕಾರ್ಯ ದರ್ಶಿ ಭಾನು ಘೋಷ್ ಮಂಡಿಸಿದ ವರದಿ ಎಡರಂಗ ಸರ್ಕಾರದ ಮೇಲೆ ಕೇಂದ್ರ ಸರ್ಕಾರದ ಹಲ್ಲೆಗಳು, ನಂತರ ಟಿ.ಎನ್.ವಿ. ಯೊಡನೆ ಗುಪ್ತ ಒಪ್ಪಂದ, ಫಲವಾಗಿ ಹುಸಿ ಚುನಾವಣಾ ವಿಜಯದ ನಂತರ ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ಸರ್ಕಾರ ಆರಂಭಿಸಿರುವ ಅರೆ ಫ್ಯಾಸಿಸ್ಟ್ ದಮನವನ್ನು, ಬುಡಕಟ್ಟು ಜನ-ವಿರೋಧಿ ಕ್ರಮಗಳನ್ನು ವಿಶ್ಲೇಷಿಸಿತು. ಚರ್ಚೆಯಲ್ಲಿ 62 ಪ್ರತಿನಿಧಿಗಳು ಪಾಲುಗೊಂಡರು.

ಈ ಕೆಳಗಿನ ಆರು ಬೇಡಿಕೆಗಳ ಮೇಲೆ ರಾಜ್ಯಾದ್ಯಂತ ಸಂಯುಕ್ತ ಆಂದೋಲನ ಬೆಳೆಸಲು ರಾಜ್ಯ ಸಮ್ಮೇಳನ ಕರೆ ನೀಡಿತು.

1) ಗಲಭೆ ಪೀಡಿತ ಪ್ರದೇಶವೆಂಬ ಘೋಷಣೆ ರದ್ದುಪಡಿಸಿ ಸೇನೆಯ ವಾಪಸಾತಿ.

2) ರಾಜ್ಯದಲ್ಲಿ ಅನಾಗರಿಕ ಆಳ್ವಿಕೆ ಕೊನೆಗೊಳ್ಳಬೇಕು: ಪ್ರಜಾಪ್ರಭುತ್ವ ಮತ್ತು ವೈಯುಕ್ತಿಕ ಸ್ವಾತಂತ್ರ್ಯದ ಮರುಸ್ಥಾಪನೆ.

3) ವಿಸರ್ಜಿಸಲ್ಪಟ್ಟ ಚುನಾಯಿತ ಸಂಸ್ಥೆಗಳಲ್ಲಿ ಹೊಸ ಚುನಾವಣೆ ನಡೆಸಬೇಕು. ತರ್ಥಾಥಿತ ಅಭಿವೃದ್ಧಿ ಸಮಿತಿಗಳನ್ನು ವಿಸರ್ಜಿಸಬೇಕು.

4) 14 ಜೀವನಾವಶ್ಯಕ ಸಾಮಗ್ರಿಗಳನ್ನು ರಾಜ್ಯಾದ್ಯಂತ ಅಗ್ಗದ ಬೆಲೆಯಲ್ಲಿ ಒದಗಿಸಬೇಕು. ಸ್ವಾಯತ್ತ ಅಭಿವೃದ್ಧಿ ಸಮಿತಿ ಪ್ರದೇಶಗಳಲ್ಲಿ ಝೂಮಿಯಾಗಳಿಗೆ, ಭೂಹೀನರಿಗೆ ಅಗ್ಗದರದ ರೇಶನಿಂಗ್ ವ್ಯವಸ್ಥೆ. ಲೇವಾದೇವಿಗಾರರು, ಲಾಭಕೋರರು ಮತ್ತು ಕಾಳಸಂತೆ ಕೋರರ ವಿರುದ್ಧ ಜಂಟೀ ಹೋರಾಟ.

5) ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ತೀವ್ರ ಕ್ರಮ. ಈಗಿನ ಸಮ್ಮಿಶ್ರ ಸರ್ಕಾರ ಬಂದ ಮೇಲೆ ತೆಗೆದು ಹಾಕಿದ ಎಲ್ಲಾ ತಾತ್ಕಾಲಿಕ ನೌಕರರನ್ನು ವಾಪಾಸು ತೆಗೆದುಕೊಂಡು ಖಾಯಂ ಗೊಳಿಸುವುದು. ಖಾಯಂ ಹುದ್ದೆಗಳಿಗೆ ಖಾಯಂ ನೇಮಕ.

6) ಬುಡಕಟ್ಟು ಅಲ್ಪಸಂಖ್ಯಾತರ ಮೀಸಲಾತಿ ಹಕ್ಕುಗಳಲ್ಲಿ, ಸ್ವಾಯತ್ತ ಕ್ಷೇತ್ರಗಳಲ್ಲಿ ಹಸ್ತಕ್ಷೇಪ ನಿಲ್ಲಬೇಕು. ಸಂವಿಧಾನದಲ್ಲಿ ಆರನೇ ಶೆಡ್ಯೂಲನ್ನು ತಿದ್ದುಪಡಿ ಮಾಡಲು ಸಂಸತ್ತಿನಲ್ಲಿ ಮಂಡಿಸಿದ ಮಸೂದೆಯನ್ನು ವಾಪಾಸು ಪಡೆಯಬೇಕು.

ಸಮ್ಮೇಳನ 49 ಸದಸ್ಯರುಳ್ಳ ಹೊಸ ರಾಜ್ಯಸಮಿತಿಯನ್ನು ಆರಿಸಿತು. ಇದು 11 ಸದಸ್ಯರುಳ್ಳ ಸೆಕ್ರೆಟಾರಿಯಟ್‌ನ್ನು ಆರಿಸಿತು. ದಶರಥ್ ದೇಬ್ ಕಾರ್ಯದರ್ಶಿಯಾಗಿ ಚುನಾಯಿತರಾದರು.

13ನೇ ಗುಜರಾತ್ ರಾಜ್ಯ ಸಮ್ಮೇಳನ

ಗುಜರಾತ್ ರಾಜ್ಯ ಸಿ.ಪಿ.ಐ.(ಎಂ)ನ 13ನೇ ಸಮ್ಮೇಳನ ಭಾವನಗರದಲ್ಲಿ ನವೆಂಬರ್ 14 ರಂದು ಮೆರವಣಿಗೆ ಹಾಗೂ ಸಾರ್ವಜನಿಕ ರ‍್ಯಾಲಿಯೊಂದಿಗೆ ಆರಂಭವಾಯಿತು. ಬಿ.ಟಿ.ಆರ್. ಧ್ವಜಾರೋಹಣ ಮಾಡಿದರು ಹಾಗೂ ಸಮ್ಮೇಳನವನ್ನು ಉದ್ಘಾಟಿಸಿದರು.

ನವೆಂಬರ್ 15 ರಂದು ನರ್ಮದಾ ಕಣಿವೆ ಯೋಜನೆ, ಮಹಿಳೆಯರ ಮೇಲೆ ಅತ್ಯಾಚಾರ, ವಿಶ್ವ ಶಾಂತಿ ಕುರಿತ ನಿರ್ಣಯಗಳನ್ನು ಅಂಗೀಕರಿಸಿದ ನಂತರ ವರದಿ ಮಂಡಿಸಲಾಯಿತು. ಬೇರೆ ವಿವಿಧ ಸಾಮೂಹಿಕ ರಂಗಗಳ ವರದಿಗಳನ್ನು ಮಂಡಿಸ ಲಾಯಿತು. 214 ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನದಲ್ಲಿ 54 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು.

ಸಮ್ಮೇಳನ ಆರಿಸಿದ ಹೊಸ ರಾಜ್ಯ ಸಮಿತಿಯಲ್ಲಿ 17 ಸದಸ್ಯರಿದ್ದು ಕಾಂ.ಚಿಂಕೋರ್‌ಭ್ಯಾಶಾ ಕಾರ್ಯ ದರ್ಶಿಯಾಗಿ ಆಯ್ಕೆಗೊಂಡರು. ಹದಿಮೂರನೇ ಮಹಾಧಿವೇಶನಕ್ಕೆ ಮೂವರು ಪ್ರತಿನಿಧಿಗಳು ಒಬ್ಬರು ಪರ್ಯಾಯ ಪ್ರತಿನಿಧಿ ಹಾಗೂ ಇಬ್ಬರು ವೀಕ್ಷಕರನ್ನು ಆರಿಸಲಾಯಿತು.

ಐಕ್ಯತೆಯ ಹೋರಾಟಗಾರರ ರಾಜ್ಯದಲ್ಲಿ

ಸಿ.ಪಿ.ಐ.(ಎಂ)ನ ಪಂಜಾಬ್ ರಾಜ್ಯ ಸಮ್ಮೇಳನ ನವೆಂಬರ್ 29 ರಿಂದ ಡಿಸೆಂಬರ್ 1ರ ವರೆಗೆ ಸಂಗ್ರೂರಿನಲ್ಲಿ ಕಾಮ್ರೇಡ್ ಚನ್ನನ್‌ಸಿಂಗ್ ಧೂತ್ ನಗರದಲ್ಲಿ ಜರುಗಿತು. ಸಮ್ಮೇಳನದ ಅಂತ್ಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ 40 ಸಾವಿರ ಜನ ಭಾಗವಹಿಸಿದರು. ಅವರಲ್ಲಿ 5 ಸಾವಿರ ಮಹಿಳೆ ಯರು ಕಾಂ.ಸುರ್ಜಿತ್ ಹಾಗೂ ಕಾಂ.ನಾಯನಾರ್ ಜನರನ್ನುದ್ದೇಶಿಸಿ ಮಾತ ನಾಡಿದರು.

ಈ ಮೊದಲು ನವೆಂಬರ್ 29 ರಂದು ಕಾಂ.ಸುರ್ಜಿತ್ ಸಮ್ಮೇಳನವನ್ನು ಉದ್ಘಾಟಿಸಿದರು. ದೇಶದ ಐಕ್ಯತೆ ಹಾಗೂ ಸಮಗ್ರತೆಯನ್ನು ರಕ್ಷಿಸಲು ಎಡಬಿಡದೆ ಹೋರಾಟ ನಡೆಸಿದ ಪಕ್ಷವೆಂದು ಜನಗಳ ನಡುವೆ ಹೆಸರುಗಳಿಸುತ್ತಿರುವ ನಮ್ಮ ಪಕ್ಷದ ಸದಸ್ಯತ್ವ ಈಗ 8859ಕ್ಕೇರಿದೆ. ಅದೇ ರೀತಿ ಸಾಮೂಹಿಕ ಸಂಘಟನೆಗಳ ಸದಸ್ಯತ್ವವೂ ಹೆಚ್ಚಿದೆ.

ಸಮ್ಮೇಳನ 31 ಸದಸ್ಯರಿರುವ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಗುರುಚರಣ್‌ಸಿಂಗ್ ರಂಧಾವಾ ಕಾರ್ಯದರ್ಶಿಯಾಗಿ ಚುನಾಯಿತ ರಾದರು. 13ನೇ ಮಹಾಧಿವೇಶನಕ್ಕೆ 20 ಪ್ರತಿನಿಧಿ ಗಳನ್ನು ಹಾಗೂ 3 ವೀಕ್ಷಕರನ್ನು ಆರಿಸಲಾಯಿತು.

ಆಂಧ್ರಪ್ರದೇಶ ಹೆಚ್ಚುತ್ತಿರುವ ಶಕ್ತಿ ತೋರಿದ ಸಮ್ಮೇಳನ

ಅಕ್ಟೋಬರ್ 10 ರಂದು ಹೈದರಾಬಾದ್‌ನಲ್ಲಿ ಸುಂದರಯ್ಯ ವಿಜ್ಞಾನ ಕೇಂದ್ರದ ಉದ್ಘಾಟನೆ ಯ ಸಂದರ್ಭದಲ್ಲಿ ಎರಡು ಲಕ್ಷ ಜನ ಸೇರಿದ ಸಾರ್ವಜನಿಕ ಸಭೆ ನಡೆದಿತ್ತು. ಒಂದೇ ತಿಂಗಳೊಳಗೆ ಮತ್ತೆ ಅಂತಹುದೇ ಬೃಹತ್ ರ‍್ಯಾಲಿ ಸಂಘಟಿಸುವುದು ಸಿ.ಪಿ.ಐ.(ಎಂ) ರಾಜ್ಯ ಘಟಕಕ್ಕೆ ಸಾಧ್ಯವಾಯಿತು. ಇದು ನವೆಂಬರ್ 7 ರಂದು 16ನೇ ಆಂಧ್ರ ರಾಜ್ಯ ಸಮ್ಮೇಳನದ ಕೊನೆಯ ದಿನದಂದು ನಡೆದ ಸಭೆ. ನವಂಬರ್ 4 ರಿಂದ 7 ರವರೆಗೆ ವಿಜಯವಾಡಾದ ಅಮರವೀರಲ ನಗರದಲ್ಲಿ ಈ ಸಮ್ಮೇಳನ ನಡೆಯಿತು.

ಕಾ.ಬಿ.ಟಿ.ರಣದಿವೆ ಸಮ್ಮೇಳನವನ್ನು ಉದ್ಘಾಟಿಸಿ ದರು. ಕಾಂ.ಎಂ.ಬಸವಪುನ್ನಯ್ಯ ಸಮ್ಮೇಳನವನ್ನು ಅಭಿನಂದಿಸಿ ದರು. ರಾಜ್ಯದ 23462 ಸದಸ್ಯರನ್ನು ಪ್ರತಿನಿಧಿಸಿದ 397 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. 1985 ರಲ್ಲಿ ಪಕ್ಷದ ಸದಸ್ಯ ಸಂಖ್ಯೆ 18756 ಇತ್ತು. ಪಕ್ಷದ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಸದಸ್ಯತ್ವ 7 ಲಕ್ಷದಿಂದ ದ್ವಿಗುಣಗೊಂಡು 13.5 ಲಕ್ಷಕ್ಕೇರಿದೆ. ಮಹಬೂಬ್ ನಗರ ಮತ್ತು ವಿಶಾಖ ಪಟ್ಟಣಂ ನಂತಹ ಹೊಸ ಪ್ರದೇಶಗಳಲ್ಲೂ ಪಕ್ಷದ ಚಟುವಟಿಕೆ ಹರಡಲಾರಂಬಿಸಿದೆ.

ಎಲ್.ಬಿ.ಗಂಗಾಧರರಾವ್ ಮಂಡಿಸಿದ ರಾಜ್ಯ ಸಮಿತಿಯ ವರದಿಯ ಮೇಲೆ ಚರ್ಚೆ ನಡೆದ ಮೇಲೆ ಅದನ್ನು ಅಂಗೀಕರಿಸಲಾಯಿತು. ಸಮ್ಮೇಳನ ರಾಜ್ಯದ ರಾಜಕೀಯ, ತೆಲುಗು ದೇಶಂ ಸರ್ಕಾರದ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿತು.

ಇದರಲ್ಲಿ ತೆಲುಗುದೇಶಂ ಸರ್ಕಾರ ಕೈಗೊಂಡ ಹಲವು ಜನಪರ ಕ್ರಮಗಳನ್ನು ಗುರುತಿಸುವುದರ ಜತೆಗೇ ಅದರ ಆಳ್ವಿಕೆಯ ಕೆಲವು ನಕಾರಾತ್ಮಕ ಸಂಗತಿಗಳನ್ನು ಹೇಳಲಾಗಿದೆ. ತೆಲುಗುದೇಶಂ ತಾನೊಂದು ಎಡಪಕ್ಷ ಎಂದು ಹೇಳಿಕೊಂಡರೂ ಅದರ ಬೂರ್ಜ್ವಾ-ಭೂಮಾಲೀಕರ ಸ್ವಭಾವ ದಲಿತ ವಿಭಾಗಗಳ ಬೇಡಿಕೆ ಈಡೇರಿಸುವಲ್ಲಿ ಅಡ್ಡಿ ಯಾಗುತ್ತಿದೆ. ಆಡಳಿತ ಮತ್ತು ಪೊಲೀಸ್ ವ್ಯವಸ್ಥೆ ರಾಜ್ಯಸರ್ಕಾರದ ಹತೋಟಿಯಿಂದ ಹೊರಗೆ ಹೋಗುತ್ತಿವೆ ಎಂದ ನಿರ್ಣಯ ಅತ್ತ ಕಾಂಗ್ರೆಸ್(ಐ) ಸಂಕುಚಿತ ಪ್ರಾದೇಶಿಕತೆಯೆನ್ನೆಬ್ಬಿಸಿ ಸರ್ಕಾರ ಉರುಳಿಸುವ ವಿಫಲ ಪ್ರಯತ್ನ ನಡೆಸಿದ್ದನ್ನು ಗಮನಿಸಿತು. ತೆಲುಗು ದೇಶಂ ಸರ್ಕಾರ ತಕ್ಷಣ 9 ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿ ಸುತ್ತಾ ಜನತೆಯ ಸಂಕಷ್ಟಗಳನ್ನು ಹಗುರ ಗೊಳಿಸುವ ಈ ಬೇಡಿಕೆಗಳ ಈಡೇರಿಕೆಗೆ ತಕ್ಷಣ ಕ್ರಮ ಆರಂಭಿಸದಿದ್ದರೆ ಈ ಬಗ್ಗೆ ಹೋರಾಟಗಳನ್ನು ಸಂಘಟಿಸುವ ಎಚ್ಚರಿಕೆಯನ್ನು ನೀಡಿದೆ.

ಸಮ್ಮೇಳನ 58 ಸದಸ್ಯರ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಇದು 10 ಸದಸ್ಯರುಳ್ಳ ಸೆಕ್ರೆಟಾರಿಯೆಟನ್ನು ಆರಿಸಿತು. ಎಲ್.ಬಿ.ಗಂಗಾಧರ ರಾವ್ ಕಾರ್ಯದರ್ಶಿಯಾಗಿ ಪುನರಾಯ್ಕೆ ಗೊಂಡರು.

ತಮಿಳುನಾಡು- ಅಭೂತಪೂರ್ವ ರ‍್ಯಾಲಿ

ನವೆಂಬರ್ 27ರಂದು ಮದ್ರಾಸ್ ಹಿಂದೆಂದೂ ಕಂಡರಿಯದ ಭವ್ಯ ಮೆರವಣಿಗೆಯನ್ನು 1 ಲಕ್ಷ ಶಿಸ್ತಿನ ಜನತೆ ಭಾಗವಹಿಸಿದ್ದ ಸಾರ್ವಜನಿಕ ಸಭೆಯನ್ನು ಕಂಡಿತು. ಅದು ನವಂಬರ್ 23ರಂದು ಆರಂಭ ವಾದ ತಮಿಳುನಾಡು ಸಿ.ಪಿ.ಐ.(ಎಂ) ಹದಿಮೂರನೇ ರಾಜ್ಯ ಸಮ್ಮೇಳನ ಬಹಿರಂಗ ಸಭೆಯಾಗಿತ್ತು. ರಾಜ್ಯದಲ್ಲಿ ಪಕ್ಷ ಒಂದು ಗಣನೀಯ ಶಕ್ತಿಯಾಗಿ ಬೆಳೆದು ಬಂದುದರ ದ್ಯೋತಕವಾಗಿತ್ತು.

33153 ಸದಸ್ಯರನ್ನು ಪ್ರತಿನಿಧಿಸಿದ 430 ಪ್ರತಿನಿಧಿಗಳು (ಇವರಲ್ಲಿ ಮೂವತ್ತು ಮಹಿಳಾ ಪ್ರತಿನಿಧಿಗಳು) ಭಾಗವಹಿಸಿದ, ಸಮ್ಮೇಳನವನ್ನು ಕಾಂ.ಬಿ.ಟಿ.ಆರ್. ಉದ್ಘಾಟಿಸಿದರು.

ಸಮ್ಮೇಳನ ವರದಿಯನ್ನು ಚರ್ಚಿಸಿ ಅಂಗೀಕರಿಸಿದ ಮೇಲೆ 72 ಸದಸ್ಯರಿರುವ ಹೊಸ ರಾಜ್ಯ ಸಮಿತಿ ಆರಿಸಲ್ಪಟ್ಟಿತು. ಎ.ನಲ್ಲಶಿವನ್ ಕಾರ್ಯದರ್ಶಿ ಯಾಗಿ ಆಯ್ಕೆಗೊಂಡರು. ಮಹಾಧಿವೇಶನಕ್ಕೆ 40 ಪ್ರತಿನಿಧಿ ಗಳನ್ನು ಆರಿಸಲಾಯಿತು.

ಅಸ್ಸಾಂ- ಐಕ್ಯತೆಯ ಬಾವುಟ ಶರಣಾಗುವುದಿಲ್ಲ

ಮೂರು ವರ್ಷಗಳ ಹಿಂದೆ ರಾಷ್ಟ್ರೀಯ ಪಕ್ಷಗಳನ್ನು ದೂರವಿಟ್ಟು ಅಸ್ಸಾಂನ್ನು ಒಂದು ದ್ವೀಪವಾಗಿಸಲು ಎ.ಜಿ.ಪಿ. ಬಯಸಿತ್ತು. ಆದರೆ ಈಗ ಸನ್ನಿವೇಶ ಬದಲಾಗಿದೆ. ಎ.ಜಿ.ಪಿ.ಅಧಿಕೃತವಾಗಿ ರಾಷ್ಟ್ರೀಯ ರಂಗ ಸೇರಿದೆ. ಆದರೂ ಅದರ ಅಲ್ಪಸಂಖ್ಯಾತ ವಿರೋಧಿ ನಿಲುವು ಇನ್ನೂ ಇದೆ. ಅಸ್ಸಾಂ ಒಂದು ಬಹು ಭಾಷಾ ರಾಜ್ಯ. ಐಕ್ಯತೆಯ ಬಾವುಟವನ್ನು ಸಂಕುಚಿತವಾದಿಗಳ ಬೆದರಿಕೆಗೆ ಬಗ್ಗಿ ಶರಣಾಗುವುದಿಲ್ಲ. ಸಿಲ್ಚಾರ್‌ನಲ್ಲಿ ನವೆಂಬರ್ 3 ರಂದು ನಡೆದ ಬಹಿರಂಗ ಸಭೆಯಲ್ಲಿ ಇ.ಎಂ.ಎಸ್. 20 ಸಾವಿರ ಜನರ ರ‍್ಯಾಲಿಯನ್ನುದ್ದೇಶಿಸಿ ನುಡಿದ ಮಾತುಗಳಿವು.

ಅಕ್ಟೋಬರ್ 31ರಂದು ಇ.ಎಂ.ಎಸ್. ರವರೇ ಉದ್ಘಾಟಿಸಿದ ಸಿ.ಪಿ.ಐ.(ಎಂ)ನ ಹದಿಮೂರನೇ ಅಸ್ಸಾಂ ರಾಜ್ಯ ಸಮ್ಮೇಳನದಲ್ಲಿ 293 ಪ್ರತಿನಿಧಿಗಳು ಹಾಗೂ 14 ವೀಕ್ಷಕರು ಭಾಗವಹಿಸಿದ್ದರು. ಇವರಲ್ಲಿ 19 ಮಹಿಳೆಯರು.

68 ಪುಟಗಳ ವರದಿಯನ್ನು ಕೂಲಂಕಷವಾಗಿ ಚರ್ಚಿಸಿ ಅಂಗೀಕರಿಸಿದ ಮೇಲೆ ಸಮ್ಮೇಳನ 33 ಸದಸ್ಯರ ಹೊಸ ರಾಜ್ಯಸಮಿತಿಯನ್ನು ಆರಿಸಿತು. ನಂದೇಶ್ವರ್ ತಾಲ್ಲೂಕ್‌ದಾರ್ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. 13ನೇ ಮಹಾಧಿವೇಶನಕ್ಕೆ 16 ಪ್ರತಿನಿಧಿಗಳನ್ನು ಆರಿಸಲಾಯಿತು.

ಕೇರಳಃ ಆಲೆಪ್ಪಿಯಲ್ಲಿ ಕೆಂಪು ಸಾಗರ

ಸುಮಾರು ಮೂರು ತಿಂಗಳಿಂದ ಕೇರಳದ 13ನೇ ರಾಜ್ಯ ಸಮ್ಮೇಳನಕ್ಕೆ ಜನತೆ ನಡೆಸಿದ ತಯಾರಿ ನವೆಂಬರ್ 20 ರಂದು ತಾರಕಕ್ಕೇರಿತ್ತು. ಕಾಂಗ್ರೆಸ್ (ಐ)ನ "ಮಲೆಯಾಳಂ ಮನೋರಮಾ"ಪತ್ರಿಕೆ ಕೂಡಾ ಉಕ್ಕೇರಿದ ಕೆಂಪು ಪ್ರವಾಹ ಎಂದು ಅದನ್ನು ವರ್ಣಿಸಬೇಕಾಗಿ ಬಂತು. ಈ ರ‍್ಯಾಲಿ ಒಂದೇ ಸಾಲಿನಲ್ಲಿ ಸಾಗಿದ್ದರೆ ಒಂದು ಸ್ಥಳವನ್ನು ದಾಟಲು ಒಂದು ದಿನವಾದರೂ ಸಾಲುತ್ತಿರಲಿಲ್ಲ ಎಂದಿತು ಇನ್ನೊಂದು ಬೂರ್ಜ್ವಾ ಪತ್ರಿಕೆ 'ಮಾತೃಭೂಮಿ' ಆಲೆಪ್ಪಿಯ ಜಿಲ್ಲೆಯ ಮೂಲೇ-ಮೂಲೆಗಳಿಂದ ಲಕ್ಷಾಂತರ ಜನ ಆಲೆಪ್ಪಿಯ ಕಡಲತಡಿಯ 'ಪಿ.ಕೃಷ್ಣಪಿಳ್ಳೆನಗರ'ದಲ್ಲಿ ರಾಜ್ಯಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಭಾಗವಹಿಸಿದರು.

15812 ಸಿದ್ಧತಾ ಸಭೆಗಳ ನಂತರ ನವೆಂಬರ್ 17 ರಂದು ಆಲೆಪ್ಪಿಯಲ್ಲಿ 13ನೇ ಕೇರಳ ರಾಜ್ಯ ಸಮ್ಮೇಳನ ಆರಂಭವಾಯಿತು. ಆಲೆಪ್ಪಿ ಪುನ್ನಪ-ವಾಯಲಾರ್ ಹುತಾತ್ಮರ ಜಿಲ್ಲೆ. ಅವರ ಚಿರನಿದ್ರೆಯ ಸ್ಥಳದಿಂದ ಮೆರವಣಿಗೆಯಲ್ಲಿ ತಂದ ಕೆಂಬಾವುಟ ಹಾರಿಸುವುದರೊಂದಿಗೆ ಸಮ್ಮೇಳನ ಆರಂಭವಾಯಿತು. ಇ.ಎಂ.ಎಸ್. ಉದ್ಘಾಟಿಸುತ್ತಾ ಪಕ್ಷದ ಕಳೆದ ರಾಜ್ಯ ಸಮ್ಮೇಳನ ಜಾತಿ-ಕೋಮು ಪಕ್ಷಗಳನ್ನು ಕುರಿತಂತೆ ನಿಲುವಿನ ಪ್ರಶ್ನೆಯ ಮೇಲೆ ಪಕ್ಷ ಒಡೆಯು ವುದೇನೋ ಎಂಬ ಭಯದ ಹಿನ್ನೆಲೆಯಲ್ಲಿ ನಡೆದುದನ್ನು ನೆನಪಿಸಿಕೊಳ್ಳುತ್ತಾ ತಪ್ಪು ಮತ್ತು ಸರಿ ಮಾರ್ಗಗಳಿಂದ ನಡೆಯುವ ಈ ಸಂಘರ್ಷದಲ್ಲಿ ಕೊನೆಗೂ ಜಯದ ಮಾರ್ಗ ಗೆದ್ದು ನಾವು ಮುನ್ನಡೆಯುವುದು ಸಾಧ್ಯವಾಯಿತು ಎಂದರು.

ರಾಜ್ಯ ಕಾರ್ಯದರ್ಶಿ ಅಚ್ಯುತಾನಂದನ್ ವರದಿ ಮಂಡಿಸಿದರು. ಇದು ಎರಡು ಭಾಗದಲ್ಲಿತ್ತು. ಮೊದಲನೆಯ ಭಾಗ ಮೊದಲ ಒಂದೂವರೆ ವರ್ಷ ಒಂದು ಜವಾಬ್ದಾರಿ ವಿರೋಧ ಪಕ್ಷವಾಗಿ ನಡೆಸಿದ ಹೋರಾಟಗಳ ದಾಖಲಾತಿಗಳನ್ನು ಹೊಂದಿದ್ದರೆ ಎರಡನೇ ಭಾಗದಲ್ಲಿ 1987ರ ನಂತರದ ಸ್ಥಿತಿ ಗತಿಯನ್ನು ವಿಶ್ಲೇಷಿಸಿತು. ರಾಜ್ಯದಲ್ಲಿ ವರ್ಗಶಕ್ತಿಗಳ ಸಮತೋಲವನ್ನು ಕಳೆದ ಮೂರು ವರ್ಷಗಳ ಅವಿಶ್ರಾಂತ ಚಟುವಟಿಕೆಗಳ ಮೂಲಕ ಕಾರ್ಮಿಕ ವರ್ಗ ಮತ್ತು ಅದರ ಆಂದೋಲನದ ಪರವಾಗಿ ಬದಲಿಸಿರುವುದು ಈ ಅವಧಿಯ ಒಂದು ಸಾಧನೆ ಎಂದಿತು ವರದಿ.

ಈ ವರದಿಯ ಮೇಲೆ 64 ಪ್ರತಿನಿಧಿಗಳು 12 ಗಂಟೆಗಳ ಕಾಲ ಚರ್ಚೆ ನಡೆಸಿದರು. ಚರ್ಚೆಗೆ ಉತ್ತರದ ನಂತರ 73 ಸದಸ್ಯರುಳ್ಳ ಹೊಸ ರಾಜ್ಯಸಮಿತಿ ಅವಿರೋಧವಾಗಿ ಚುನಾಯಿಸಲ್ಪಟ್ಟಿತು. ವಿ.ಎಸ್.ಅಚ್ಯುತಾನಂದನ್ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಪಕ್ಷದ ಸದಸ್ಯತ್ವ 1985 ರಲ್ಲಿ 1.22 ಲಕ್ಷವಿದ್ದದ್ದು 1988ರಲ್ಲಿ 1.79 ಲಕ್ಷಕ್ಕೇರಿತು. ಪಕ್ಷದ ನೇತೃತ್ವದ ವರ್ಗ ಸಂಘಟನೆಗಳ ಸದಸ್ಯತ್ವ ಕೂಡಾ 30 ಲಕ್ಷದಿಂದ 54.34 ಲಕ್ಷಕ್ಕೇರಿತು. ಸಮ್ಮೇಳನದಲ್ಲಿ 422 ಪ್ರತಿನಿಧಿಗಳು ಮತ್ತು 17 ವೀಕ್ಷಕರು ಭಾಗವ ಹಿಸಿದ್ದರು. ಇವರಲ್ಲಿ ಮಹಿಳೆಯರು 32.

ರಾಜ್ಯ ತೊಗರಿ ಬೆಳೆಗಾರರ ಸಮಾವೇಶ

1ನೇ ಪುಟದಿಂದ

೩) ಗುಲ್ಬರ್ಗಾ ಮಾರುಕಟ್ಟೆಯಲ್ಲಿ ಧರ್ಮದಾವೆ ಹಾಗೂ ಕ್ಯಾಂಪಲ್ ಹೆಸರಲ್ಲಿ ನಡೆಯುತ್ತಿರುವ ರೈತರ ಲೂಟಿಯನ್ನು ತಡೆಗಟ್ಟಬೇಕು.

ಈ ಬೇಡಿಕೆಗಳನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲು 26-12-88ರಂದು ಮನವಿ ಪತ್ರ ಸಲ್ಲಿಸಲು ತೀರ್ಮಾನಿಸಲಾಯಿತು.

ಸರ್ಕಾರ ಮುತುವರ್ಜಿವಹಿಸದೆ ಹೋದಲ್ಲಿ ಜನವರಿ ತಿಂಗಳಲ್ಲಿ ಹೋರಾಟ ಸಮಿತಿಯನ್ನು ರಚಿಸಿ ತೊಗರಿ ಬೆಳೆಯುವ ಪ್ರದೇಶದಲ್ಲಿ ತೀವ್ರ ಹೋರಾಟ ನಡೆಸಲು ಕರೆಕೊಡಲಾಯಿತು.

ಶ್ರೀ ಚನ್ನಾರೆಡ್ಡಿ ಪಾಟೀಲ ಜಿಲ್ಲಾ ಪರಿಷತ್ ಸದಸ್ಯರು ಸ್ವಾಗತ ಸಮಿತಿ ಅಧ್ಯಕ್ಷರು ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಮಾವೇಶವನ್ನು ಕಾಂ॥ಪಿ.ರಾಮಚಂದ್ರರಾವ್, ಸಿ.ಕೆ.ಪಿ.ಸದಸ್ಯರು ಉದ್ಘಾಟಿಸಿದರು. ರೈತರ ಕಷ್ಟಗಳು ಹೆಚ್ಚುತ್ತಿವೆ ಬೆಂಬಲಿತ ಬೆಲೆಗಾಗಿ ಕಿಸಾನ್ ಸಭಾ ರಾಷ್ಟ್ರವ್ಯಾಪಿ ಹೋರಾಟ ನಡೆಸುತ್ತಿದೆ. ತೊಗರಿ ಬೆಳೆಗಾರರು ಹೋರಾಟಕ್ಕಿಳಿಯಬೇಕೆಂದು ಕರೆ ಕೊಟ್ಟರು.

ಕಾ॥ಮಾರುತಿ ಮಾನ್ಪಡೆ, ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸದಸ್ಯರು ತೊಗರಿ ಬೆಳೆಗಾರರ ಕುರಿತು ಲಿಖಿತ ವರದಿಯನ್ನು ಮಂಡಿಸಿದರು.

ಕಾ॥ಜಿ.ಎನ್.ನಾಗರಾಜ್ ಪ್ರಾಂತ ರೈತ ಸಂಘ, ರಾಜ್ಯ ಸಮಿತಿ ಸದಸ್ಯರು ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಾ ರೈತರನ್ನು ಶೋಷಿಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು, ಗುತ್ತೇದಾರಿ ವ್ಯಾಪಾರಿಗಳು, ಭೂಮಾಲೀಕರ ವಿರುದ್ಧ ಹೋರಾಟ ಮಾಡುವುದನ್ನು ರೈತರು ಮೈಗೂಡಿಸಿ ಕೊಳ್ಳಬೇಕೆಂದು ಕರೆಕೊಟ್ಟರು.

ಕಾ॥ಭೀಮಸಿ ಕಲಾದಗಿ, ರಾಜ್ಯ ಸಮಿತಿ ಉಪಾಧ್ಯಕ್ಷರು, ಕಾ॥ರಾಮನಗೌಡ ರಾಯಚೂರು ಜಿಲ್ಲಾ ಸಮಿತಿ, ಕಾ॥ಬಸವರಾಜ ಮರಡಿ, ವಕೀಲರು ಗುಲ್ಬರ್ಗಾ ಜಿಲ್ಲಾ ಸಮಿತಿ, ಕಾ॥ಶಿವಶೆಟ್ಟಿ ಚಟುವಾ, ಬೀದರ್ ಜಿಲ್ಲಾ ಸಮಿತಿ ಸೇರಿದಂತೆ ಏಳುಜನ ವರದಿಯ ಮೇಲೆ ಚರ್ಚೆ ಮಾಡಿದರು.

ಕಾ॥ಸಿ.ಎಸ್.ಬಾಳೆ, ರಾಜ್ಯಸಮಿತಿ ಕಾರ್ಯದರ್ಶಿ, ವರದಿಯ ಮೇಲಿನ ಚರ್ಚೆಯ ಆಧಾರದಲ್ಲಿ ಸಮಾರೋಪ ಮಾಡಿ ಬೇಡಿಕೆ ಹಾಗೂ ಹೋರಾಟದ ಗೊತ್ತುವಳಿಯನ್ನು ಮಂಡಿಸಿದರು.

ಕೊನೆಯಲ್ಲಿ ಕಾ॥ ಕಲ್ಲಪ್ಪ ಕಿರಣಗಿ ರಾಜ್ಯ ಸಮಿತಿ ಕಾರ್ಯದರ್ಶಿಯವರು ವಂದನಾರ್ಪಣೆ ಮಾಡಿದರು.

ಸಮಾವೇಶ ನಿಮಿತ್ತ ಮೆರವಣಿಗೆಯನ್ನು ನಡೆಸಿ ಗಂಜ ಮಾರುಕಟ್ಟೆಯಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಗಂಜ ಹಮಾಲರ ಸಂಘ (ಸಿ.ಐ.ಟಿ.ಯು) ಸಭೆಯನ್ನು ವ್ಯವಸ್ಥೆ ಮಾಡಿತು

ರಾಜ್ಯದೆಲ್ಲೆಡೆ ಕೈಗಾದಿನಾಚರಣೆ

ಕೈಗಾ ಅಣುಸ್ಥಾವರ ಸ್ಥಾಪನೆಗೆ ಒತ್ತಾಯಿಸಿ ಪಕ್ಷದ 13ನೇ ಸಮ್ಮೇಳನ ನೀಡಿದ ಕರೆಯಂತೆ ಡಿಸಂಬರ್ 20 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಮತ ಪ್ರದರ್ಶನ, ಧರಣಿ, ಸಾರ್ವಜನಿಕ ಸಭೆಗಳನ್ನು ನಡೆಸಿದ ವರದಿಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಉ.ಕ.ಜಿಲ್ಲೆಯ ಸಿರಸಿಯಲ್ಲಿ ಕೈಗಾ ಅಣುಸ್ಥಾವರವನ್ನು ಸರ್ಕಾರ ಶೀಘ್ರದಲ್ಲೇ ಸ್ಥಾಪಿಸಬೇಕೆಂದು ಒತ್ತಾಯಿಸಿ ಬೆಳಿಗ್ಗೆ 10 ರಿಂದ ಪುರಸಭೆ ಕಛೇರಿ ಎದುರು ಮತಪ್ರದರ್ಶನ ನಡೆಸಿ ಡೆಪ್ಯೂಟಿ ಕಮಿಷನರ್ ಕಾರವಾರ ರವರಿಗೆ ಸಿರಿಸಿಯ ಉಪ ವಿಭಾಗಾಧಿಕಾರಿಯವರ ಮೂಲಕ ಮನವಿಯೊಂದನ್ನು ಅರ್ಪಿಸಿ ಒತ್ತಾಯಿಸಲಾಯಿತು. ಕೈಗಾರಿಕೆಗಳಲ್ಲಿ ವಿದ್ಯುತ್ ಅಭಾವದಿಂದಾಗಿ ಕಾರ್ಮಿಕರು ಉದ್ಯೋಗವಿಲ್ಲದೆ ಬಳಲುತ್ತಿದ್ದು, ರೈತರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊರತೆಯಿಂದ ತೀವ್ರ ಸಮಸ್ಯೆಗಳು ಎದುರಾಗಿರುವುದರಿಂದ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೈಗಾರಿಕೆ ಬೆಳವಣಿಗೆಗೆ ಅಣುವಿದ್ಯುತ್ ಅನಿವಾರ್ಯವೆಂದು ಮನವಿಯಲ್ಲಿ ಹೇಳಲಾಗಿದೆ. ಸಿರಸಿಯ ಪಕ್ಷದ ಕಾರ್ಯದರ್ಶಿ ಯವರಾದ ಕಾ॥ಪಿ.ಜಿ.ಮಶಾಲ್ದಿ, ಜಿಲ್ಲಾ ಸಮಿತಿ ಸದಸ್ಯರಾದ ಕಾ॥ಎಂ.ಎಸ್.ಧಾರೇಶ್ವರ, ರೈತ ಸಂಘದ ಅಧ್ಯಕ್ಷ ಕಾ॥ಬಂಗಾರೇಶ್ವರ, ಕೆ.ಗೌಡರನ್ನೊಳಗೊಂಡ ನಿಯೋಗ ಮನವಿ ಅರ್ಪಿಸಿತು. ಪರಿಸರವಾದಿಗಳ ಅರ್ಥವಿಲ್ಲದ ಅಬ್ಬರದ ಪ್ರಚಾರಕ್ಕೆ ಮಣಿಯದೇ ಕೂಡಲೇ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಒತ್ತಾಯಿಸಿದೆ.

ಬಂಟ್ವಾಳ

ಪಕ್ಷದತಾಲ್ಲೂಕು ಸಮಿತಿ ಬಂಟ್ವಾಳದ ಬಡ್ಡಕಟ್ಟೆಯಲ್ಲಿ ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ತಾ॥ಕಾರ್ಯದರ್ಶಿ ಕಾ॥ವಾಸುಗಟ್ಟಿ, ಬಿ.ಪೂವಯ್ಯ, ಬಿ.ಸಂಜೀವ ಬಂಗೇರ ರವರುಗಳು ದೇಶ ಹಾಗೂ ಕರ್ನಾಟಕ ರಾಜ್ಯ ಅಭಿವೃದ್ಧಿ ಸಾಧಿಸಲು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಗಳಿಸಲು ಕೈಗಾ ಸ್ಥಾವರ ಸ್ಥಾಪನೆಯಾಗಲೇ ಬೇಕೆಂದು ಒತ್ತಾಯಿಸಿದರು. ಅಮೇರಿಕಾದ ಬಾಲಬುಡುಕರಾಗಿರುವ ಕೆಲವರ ಅಪಪ್ರಚಾರ ಕ್ಕೆ ಕಿವಿಕೊಡಬಾರದೆಂದು ಅವರು ಮನವಿ ಮಾಡಿದರು.

ಶಿವಮೊಗ್ಗ

ಶಿವಮೊಗ್ಗದ ಬಸ್ ನಿಲ್ದಾಣದಿಂದ ಹೊರಟ ಭಾರಿ ಮೆರವಣಿಗೆ ಪ್ರಮುಖ ರಸ್ತೆಗಳನ್ನು ಹಾದು ನಗರಸಭಾ ಆವರಣದಲ್ಲಿ ಬಹಿರಂಗ ಸಭೆ ನಡೆಸಿತು. ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಕಾ॥ಎಸ್.ಬಿ.ಶಿವಶಂಕರ್ ರವರು ಮಾತನಾಡಿದರು. ವಿದ್ಯುತ್ ಕೊರತೆಯಿಂದ ಬಳಲುತ್ತಿರುವ ರಾಜ್ಯ ಪ್ರಗತಿ ಸಾಧಿಸಲು ಅಣುಸ್ಥಾವರ ಅಗತ್ಯವೆಂದ ಅವರು ವಿಜ್ಞಾನಿಗಳು ಈಗಾಗಲೇ ಈ ಕುರಿತು ಜನರಲ್ಲಿ ಮೂಡಿದ್ದ ಭೀತಿಯ ವಾತಾವರಣ ದೂರ ಮಾಡಲು ಹೇಳಿರುವುದನ್ನು ಹೆಚ್ಚು ಜನರ ಮಧ್ಯೆ ಪ್ರಚಾರ ಪಡಿಸಲು ಮುಂದಾಗಬೇಕೆಂದು ಪಕ್ಷದ ಸಂಗಾತಿಗಳಿಗೆ ಅವರು ಕರೆನೀಡಿದರು.

ದ.ಕ.ಜಿಲ್ಲೆಯಾದ್ಯಂತ ಸಭೆಗಳು

ರಾಜ್ಯದಲ್ಲಿನ ತೀವ್ರ ವಿದ್ಯುತ್‌ಕೊರತೆ, ನೀರಾವರಿ, ಕೈಗಾರಿಕೆ, ಆದುನಿಕ ವ್ಯವಸಾಯ ಮೊದಲಾದ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸುಗಮವಾಗಿ ನೆರವೇರಲು ರಾಜ್ಯಕ್ಕೆ ಕೈಗಾ ಅಣುಸ್ಥಾವರ ಅಗತ್ಯವಾಗಿದೆ. ಕೆಲ ಪರಿಸರವಾದಿಗಳು ಅಪಪ್ರಚಾರ ಕೈಗೊಂಡು ನಮ್ಮ ದೇಶದ ಹಾಗೂ ರಾಜ್ಯದ ಅಭಿವೃದ್ಧಿ ಕಾರ್ಯಗಳು ನಿಷ್ಫಲಗೊಳಿಸಲು ಪ್ರಯತ್ನಿಸುತ್ತಿರುವ ಸಾಮ್ರಾಜ್ಯಶಾಹಿ ಅಮೇರಿಕಾದ ಕೈಗೊಂಬೆಗಳಂತೆ ನಡೆದು ಕೊಳ್ಳುತ್ತಿದ್ದಾರೆಂದು ದ.ಕ. ಜಿಲ್ಲಾ ಸಮಿತಿ ಆರೋಪಿಸಿದೆ. ಪ್ರಗತಿ ವಿರೋಧಿಗಳಾಗಿರುವ ಇಂತಹ ಶಕ್ತಿಗಳನ್ನು ಮೂಲೆಗುಂಪು ಮಾಡಲು ಶೀಘ್ರವೇ ಕೈಗಾ ಅಣುಸ್ಥಾವರ ಸ್ಥಾಪನೆಯ ಕಾರ್ಯವನ್ನು ತ್ವರಿತಗೊಳಿಸಬೇಕೆಂದು ಕೇಂದ್ರ ರಾಜ್ಯ ಸರ್ಕಾರವನ್ನು ಮನವಿಯಲ್ಲಿ ಒತ್ತಾಯಿಸಿದೆ. ಜಿಲ್ಲೆಯಾದ್ಯಂತ ನಡೆದ ಮತಪ್ರದರ್ಶನ ಬಹಿರಂಗ ಸಭೆಯ ಮೂಲಕ ಜನ ಜಾಗೃತಿಗೊಳಿಸಲು ಪ್ರಚಾರ ಗಳನ್ನು ನಡೆಸಲು ವಿವರವನ್ನು ಈ ಮುಂದೆ ಓದಿ.

ಕುತ್ತಾರಪದವು

ಕುತ್ತಾರಪದವಿನಲ್ಲಿ ನಡೆದ ಸಭೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ//ಕೆ.ಆರ್.ಶ್ರೀಯಾನ್ ಮಾತನಾಡಿದರು. ಯು.ಜನಾರ್ಧನನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಕೃಷ್ಣಪ್ಪಟ್ಲೆಲರ್ ಸ್ವಾಗತಿಸಿ ರಾಮಚಂದ್ರ ಉಚ್ಚಿಲ್ ದನ್ಯವಾದವಿತ್ತರು.

ಮಂಗಳೂರು

ಎನ್.ಜಿ.ಓ. ಹಾನಲ್ಲಿ ನಡೆದ ಸಭೆಯಲ್ಲಿ ಕಾ//ಬಿ.ಮಾದವ, ಕಮಲಾಕ್ಷ ಬಂಗೇರ, ಉಮೇಶ್ ಬಂಡಾರಿ, ಶಿವಾನಂದ ಕೋಡಿಯವರುಗಳು ಮಾತನಾಡಿದರು.

ಕುಂದಾಪುರ

ರಾಜ್ಯ ಸಮಿತಿ ಸದಸ್ಯ ಕಾ//ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕಾ//ಸಿ.ನಾರಾಯಣ, ಮಹಾಬಲ ವಡೇರ ಹೋಬಳಿ ದಾಸ ಭಂಡಾರಿ ಹಾಗೂ ಸಿ.ನರಸಿಂಹರವರು. ಮಾತನಾಡಿದರು.



1ನೇ ಪುಟದಿಂದ

ಒಟ್ಟು 648 ಪ್ರತಿನಿಧಿಗಳು ಮತ್ತು 50 ವೀಕ್ಷಕರು 13ನೇ ಮಹಾಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ.

ಕಳೆದ ಮಹಾಧಿವೇಶನದ ನಂತರ ನಿಧನರಾದ ಪಕ್ಷದ ಮುಖಂಡರಾದ ಪಿ.ರಾಮಮೂರ್ತಿ, ಶಾಂತಿಮಯ ಘೋಷ್, ನೃಸಿಂಗ್ ಚಕ್ರವರ್ತಿ, ವಿ.ಪಿ.ಚಿಂತನ್, ದೀಪಕ್ ಧವನ್, ಸುಧೂಬಾಯಿ ಪಟೇಲ್ ಮತ್ತಿತರ ಅಗಲಿದ, ದುಡಿಮೆಗಾರರ ಹೋರಾಟಗಳಲ್ಲಿ ಪ್ರಾಣತ್ಯಾಗ ಮಾಡಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಿದ ಮೇಲೆ ಕಾಂ.ಬಿ.ಟಿ.ರಣದಿವೆ ಮಹಾಧಿವೇಶನದ ವರದಿಯನ್ನು ಮಂಡಿಸುತ್ತಾ ದೇಶದ, ವಿಶ್ವದ ಸನ್ನಿವೇಶದ ವಿಶ್ಲೇಷಣೆ ಮಾಡಿದರು.

ಕಳೆದ ಮಹಾಧಿವೇಶನದ ನಂತರದ ಪ್ರಮುಖ ಬೆಳವಣಿಗೆಯೆಂದರೆ ಕಾಂಗ್ರೆಸ್ (ಐ) ತ್ವರಿತಗತಿಯಿಂದ ಜನರಿಂದ ದೂರವಾಗುತ್ತಿರುವುದು. ರಾಷ್ಟ್ರೀಯ ವಿಚ್ಛಿದ್ರತೆಯ ಶಕ್ತಿಗಳನ್ನು ಎದುರಿಸುವ ಸಂಪೂರ್ಣ ಅಸಮರ್ಥತೆ ರಾಜೀವ್ ಸರ್ಕಾರದ ಕ್ರಿಮಿನಲ್ ವಿಫಲತೆ. ಅಧಿಕಾರ ಗಿಟ್ಟಿಸಿಕೊಳ್ಳಲು ವಿವಿಧ ವರ್ಗಹಿತಾಸಕ್ತಿಗಳು ಸಿದ್ಧವಾಗುತ್ತಿವೆ. ಪ್ರತ್ಯೇಕತಾವಾದಿ, ಕೋಮುವಾದಿ ಮತ್ತು ಮೂಲಭೂತವಾದಿ ಶಕ್ತಿಗಳ ವಿರುದ್ಧ ನೇರ ಸಾಮೂಹಿಕ ಮಧ್ಯಪ್ರವೇಶ ಅಗತ್ಯ. ನಾವೀಗ ಬ್ರಿಟಿಶ್ ಕಾಲದ ಪ್ರಮುಖ ಪ್ರತಿಗಾಮಿ ಶಕ್ತಿಯ ಎದುರು ನಿಂತಿದ್ದೇವೆ. ಹೊಸ ಸನ್ನಿವೇಶ ಎಂತಹುದೆಂದರೆ ನಾವು ಹೋರಾಟವನ್ನು ಜನತೆಯ ನಡುವೆ ಕೊಂಡೊಯ್ಯಬೇಕು ಎಂದರು ಬಿ.ಟಿ.ಆರ್.

ವಿ.ಪಿ.ಸಿಂಗ್‌ರ ಚುನಾವಣಾ ವಿಜಯ ದೇಶದ ರಾಜಕೀಯದಲ್ಲಿ ಒಂದು ಸಂಧಿಕಾಲವಾಗಬಹುದಾಗಿತ್ತು. ಹಾಗಾಗಲಿಲ್ಲ. ಕೆಲವು ವಿರೋಧಿ ಪಕ್ಷಗಳು ಎಡಪಕ್ಷಗಳ ಬೆಂಬಲ ಕೇಳುತ್ತಲೇ ಇನ್ನೊಂದೆಡೆ ಬಿ.ಜೆ.ಪಿ., ಆರ್.ಎಸ್.ಎಸ್. ಜತೆ ಶಾಮೀಲಾಗಬಯಸುತ್ತವೆ. ಸಾರ್ವಜನಿಕವಲಯದ ಕುತ್ತಿಗೆ ಹಿಸುಕುವ ರಾಜೀವ್ ಗಾಂಧಿ ನೀತಿಯನ್ನು ಕೆಲವು ವಿರೋಧ ಪಕ್ಷಗಳು ಟೀಕಿಸುವುದಿಲ್ಲ. ಜಾತ್ಯತೀತ, ಎಡ ಮತ್ತು ಪ್ರಜಾಪ್ರಭುತ್ವವಾದೀ ಕೂಟ ರಚಿಸುವಲ್ಲಿ ಹಿಂಜರಿಯುವುದೆಂದರೆ ಕೋಮು ಮತ್ತು ಛಿದ್ರಕಾರೀ ಶಕ್ತಿಗಳ ಕೂಟ ರಚಿಸಿದಂತಾಗುತ್ತದೆ. ಎಂದು ಬಿ.ಟಿ.ಆರ್. ನುಡಿದರು. ಈ ಸಂಧರ್ಭದಲ್ಲಿ ಎಡ ಐಕ್ಯತೆ ಅತೀ ಮುಖ್ಯ.

ಅಂತರ್‍ರಾಷ್ಟ್ರೀಯ ರಂಗದಲ್ಲಿ ಒಂದೆಡೆ ಶಾಂತಿ ಹೋರಾಟ ನಿರ್ಣಾಯಕ ಘಟ್ಟ ತಲುಪಿದೆ. ಇನ್ನೊಂದೆಡೆ ಸತತ ಬಂಡವಾಳಶಾಹೀ ಬಿಕ್ಕಟ್ಟು ತೃತೀಯ ಜಗತ್ತಿನ ದೇಶಗಳ ಆರ್ಥಿಕದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿದೆ. ಭಾರತ ಸರ್ಕಾರದ ಮೇಲೂ ವಿಶ್ವ ಬ್ಯಾಂಕಿನ ಒತ್ತಡ ಹೆಚ್ಚುತ್ತಿದೆ. ಪರಿಣಾಮವಾಗಿ ಒತ್ತಡ ಭಾರತದ ಅಲಿಪ್ತ ನೀತಿಯ ಮೇಲೂ ಹೆಚ್ಚುತ್ತಿದೆ. ಆದ್ದರಿಂದ ಜನತೆಯ ಸಾಮೂಹಿಕ ಒತ್ತಡ ಹಾಗೂ ಎಚ್ಚರಿಕೆಯ ಮೂಲಕವಷ್ಟೆ ಅಲಿಪ್ತ ನೀತಿಗೆ ರಜೀವ್ ಸರ್ಕಾರ ಚ್ಯುತಿ ತರದಂತೆ ನೋಡಿಕೊಳ್ಳಲು ಸಾಧ್ಯ ಎಂದು ಬಿ.ಟಿ.ಆರ್. ನುಡಿದರು.

ಮಹಾಧಿವೇಶನದಲ್ಲಿ ಹಾರಿಸಿದ ಕೆಂಬಾವುಟ, ಅದರ ಸ್ತಂಭ, ಹಗ್ಗ ಮತ್ತು ರಾಟೆ - ಪ್ರತಿಯೊಂದು ದುಡಿಮೆಗಾರರ ವರ್ಗದ ಹುತಾತ್ಮರ ನೆನಪುಗಳಿಂದ ಸಿಂಚಿತಗೊಂಡಿದ್ದವು.

ಬಾವುಟ ಕೇರಳದ ಉತ್ತರ ಭಾಗದಲ್ಲಿರುವ ಕಯ್ಯೂರಿನಿಂದ, ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿ ಗಲ್ಲನಪ್ಪಿದ ವೀರರ ಊರಿನಿಂದ. ಡಿಸೆಂಬರ್ 18 ರಂದು ಕಯ್ಯೂರಿನಲ್ಲಿ ಮುಖ್ಯಮಂತ್ರಿ ಇ.ಕೆ. ನಾಯನಾರ್ ಬಾವುಟವನ್ನು ಮತ್ತು ಜ್ಯೋತಿಯನ್ನು ಡಿ.ವೈ.ಎಫ್.ಐ.ನ ಮಾಜೀ ಅಧ್ಯಕ್ಷ ಇ.ಪಿ.ಜಯರಾಜನ್‌ಗೆ ನೀಡಿದರು. ತಲ್ಲಿಚೇರಿ, ಕೊಝಿಕೋಡ್, ಮಲಪ್ಪುರಮ್, ತ್ರಿಶೂರ್, ಎರ್ನಾಕುಲಂ, ಕೊಟ್ಟಾಯಂ, ಅಡೂರು, ಕಿಲಿಮಣ್ಣೂರುಗಳನ್ನು ಹಾದು ಈ ಜಾಥಾ ಡಿಸೆಂಬರ್ 26 ರಂದು ಸಾಯಂಕಾಲ ತಿರುವನಂತಪುರದ ಕಾ॥ಪಿ. ಸುಂದರಯ್ಯ ನಗರವನ್ನು ತಲುಪಿತು.

ಬಾವುಟದ ಸ್ತಂಭದ ಪಯಣ ಪುನ್ನಪ್ರ ವಾವಲಾರ್ ಹುತಾತ್ಮರು ಚಿರನಿದ್ರೆಗೆ ಸಂದ ಪವಿತ್ರ ಸ್ಥಳದಿಂದ. ರಾಜ್ಯ ಕಾರ್ಯದರ್ಶಿ ಅಚ್ಯುತಾನಂದನ್ ಜಾಥಾ ಕ್ಯಾಪ್ಟನ್ ವಿ.ಕೇಶವನ್‌ರವರಿಗೆ ನೀಡಿದರು. ಇದೂ ಡಿಸೆಂಬರ್ 26ರ ಸಾಯಂಕಾಲ ಕಾ॥ಪಿ.ಸುಂದರಯ್ಯನಗರ ತಲುಪಿತು.

ರಾಟೆ ಮತ್ತು ಹಗ್ಗ ಬಂದದ್ದು ನ್ಯೆ ಆಚಂಕರದಲ್ಲಿರುವ ಕಾಂ.ರಾಘವನ್ ಸಮಾಧಿಯಿಂದ. ಡಿ.26ರಂದು ಬೆಳಿಗ್ಗೆ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ಜಾಥಾ ಕ್ಯಾಪ್ಟನ್ ಎಂ.ವಿಜಯಕುಮಾರ್‌ಗೆ ನೀಡಿದರು. ಅಥ್ಲೆಟ್‌ಗಳ ಈ ಜಾಥಾ ಮಹಾಧಿವೇಶನ ನಗರಕ್ಕೆ ತಂದಿತು.



ಕಯ್ಯೂರಿನಿಂದ ಕೆಂಬಾವುಟ, ಜ್ಯೋತಿ ತಿರುವನಂತಪುರದತ್ತ ಸಾಗಿದೆ

Printed & Published by P. Ramachandra Rao on behalf of the Communist Party of India (Marxist) Karnataka State Committee, K.V. Temple Street, Sulthanpet, Bangalore-560053. Managing Editor: N.K.Upadhayaya.
Managerial office: No.24, Shubha lodge Complex, 5th Main Road, Gandhinagar, Bangalore-560009
Typeset at Chandana Associates, B'lore-40 Ph:351265